ಪ್ರೇತ – ಕ್ಯೂ

ಹಂಪೆಯಲ್ಲಿ

ಬಾ ಇಲ್ಲಿ, ಬಾ ಇಲ್ಲಿ; ಕನ್ನಡಿಗ ಬಾ ಇಲ್ಲಿ:
ಮೈಮೆಯನು ಕಂಡರಿಯದಿಹ ನೀನು, ನೋಡದರ
ಹುಳು ಹಿಡಿದ ಹೆಣವನಾದರು, ನೋಡು ಬಾ ಇಲ್ಲಿ!
ಮಸಣದಲಿ ಜಾನಿಪೊಡೆ, ಸಾಧಕನೆ, ಬಾ ಇಲ್ಲಿ:
ಹಂಪೆಯಿದು ಕಲಿಯುಗದ ಹಸಿಯ ಹಿರಿಮಸಣ!
ಕನ್ನಡಾಂಬೆಯ ಮುಡಿಯು ಸಿಡಿದು ಒಡೆದುದು ಇಲ್ಲೆ:
ನಿನಗೆ ಕಂಬನಿ ಇದೆಯೆ? ಕಬ್ಬಿಗನೆ, ಸುರಿಸು ಬಾ.
ಕಾಶಿಗೇತಕೆ ಹೋಗುತಿಹೆ, ಯಾತ್ರಿಕನೆ ನೀನು?
ಹಂಪೆ ತೆಂಕಣ ಕಾಶಿ: ಬೀರದಿಂ ಪುಡಿಪುಡಿಯೂ
ಮರಣದಿ ಪವಿತ್ರತರವಾದ ಕಾಶಿಯಿದು ಕೇಳ್.
ಯೋಗಿ ವಿದ್ಯಾರಣ್ಯನಡಿಯ ಪುಡಿ ಇಹುದಿಲ್ಲಿ:
ಮೃತ್ಯು ಪಾವನಗೈದ ಶುಭತರಕ್ಷೇತ್ರವಿದು!
ಪಾಳಾದ ಕನ್ನಡಾರಾಮವಿದು! ಕನ್ನಡಿಗ
ಯಾತ್ರಿಕನೆ, ಬಾ ಇಲ್ಲಿ! ಬೇಡುವೆನು, ಬಾ ಇಲ್ಲಿ!
ಹಂಪೆಯ ವಿರೂಪಾಕ್ಷ ಭಕ್ತರನೆದುರು ನೋಡಿ
ಕಂಬನಿಯ ಸೂಸುತಿಹನಿಲ್ಲಿ; ಬಾ ಇಲ್ಲಿ!
ಏಕಾಂಗಿಯಾಗಿಹನು! ಅಯ್ಯೊ ಬೇಸತ್ತಿಹನು
ಭಗವಂತ! ಓಡಿ ಬಂದಪ್ಪುವನು ಭಕ್ತನನು!
ಬಾ, ಇಲ್ಲಿ ಬಾ! ಬಾ, ಇಲ್ಲಿ ಬಾ!

೦೯ – ೦೪ – ೧೯೨೯

ಈ ಧ್ವಜಗೌರವವನು ಕಾಯಿ!*

ಈ ಧ್ವಜಗೌರವವನು ಕಾಯಿ:

ಶಿವನೆದೆ ತಲ್ಲಣಿಪುದು, ತಾಯಿ!

ಕೋಮಲತರ ಪ್ರೇಮಾಸಿಯ ಮುಂದೆ
ದಾನವ ದಳವೂ ಸರಿವುದು ಹಿಂದೆ.

ತೂರ್ಯಧ್ವನಿಯಿಂ ಘೋಷಿಸಿ ಹೇಳು:
"ಮೈತ್ರಿಯೆ ಜಯಲಕ್ಷ್ಮಿಯ ಕರವಾಳ!"

ಹಿಂಸೆಯ ಹಾವಿನ ಹಲ್ಲನು ಕೀಳು;
ಹೆಡೆಮಣಿ ಕೊಡಿಯನು ಮುಡಿಯಲಿ ತಾಳು;
ಸ್ವಾತಂತ್ರ್ಯದ ಬಾಳು!

ಧ್ವಜವೇ ಸ್ವಾತಂತ್ರ್ಯದ ಶಿವಮೂರ್ತಿ;
ಧ್ವಜ ರಕ್ಷಣಯೇ ದೇಶಕೆ ಕೀರ್ತಿ.

ಸ್ವಾತಂತ್ರ್ಯವೆ ಶಿವ: "ಜಯಶಿವ!" ಎನ್ನಿ;
ಪ್ರಾಣನಿವೇದನ ಪೂಜೆಗೆ ಬನ್ನಿ!

ಜಯಶಿವ! ಜಯಶಿವ! ಜಯಶಿವ! ಜಯ್!
ಸ್ವಾತಂತ್ರ್ಯದ ಶಿವನಿಗೆ ಜಯ್! ಜಯ್! ಜಯ್!

೧೩ – ೦೪ – ೧೯೩೮

---

* ಶಿವಪುರ ಕಾಂಗ್ರೇಸಿನ ಅಧಿವೇಶನದಲ್ಲಿ ಪೋಲಿಸರು ಧ್ವಜವನ್ನು ಕೀಳಲು ಬಂದಾಗ ಸ್ವಯಂಸೇವಕಿಯರು ಅದನ್ನು ಅಪ್ಪಿಹಿಡಿದು ಕಾಪಾಡಿದರು.

ಐಸಡೋರಾ*

ಅಮರ ಅಸುರಗಳೆರಡು ಹೆಣೆದಿವೆ

ಇವಳ ಬಾಳಿನ ಬಲೆಯಲಿ;
ಕಲೆಯ ತಾವರೆಗಿಳಿದು ಮುಳುಗಿದ-
ಳಯ್ಯೊ ಕೆಸರಿನ ಹೊಲೆಯಲಿ!

ಹಲವು ತಾರೆಯ ನಂಬಿ ತನ್ನಯ
ಜೀವಯಾನದಿ ಕೆಟ್ಟಳು;
ಒಲುಮೆ ಸೋಗಿನ ಒಡಲಿನಳುಪಿಗೆ
ಮಾನವನೆ ಬಲಿಗೊಟ್ಟಳು.

ತನ್ನ ಕಿರುದರ್ಶನಕೆ ದಿವ್ಯಾ-
ದರ್ಶವನು ಕತ್ತರಿಸುತ
ಬಾಲ ಬಯಲೊಳಗಡವಿ ನಡೆದಳೊ
ಕುಣಿವವೊಲು ತತ್ತರಿಸುತ!

ಕೈಯ ಹಿಡಿದರು ಎಲ್ಲ; ಕಡೆಯಲಿ
ಕೈಹಿಡಿವರಿಲ್ಲಾಯ್ತಲಾ!
ಬಿದಿಯ ಕರುಣೆಯು ತಿವಿದರೂ ನಿನ-
ಗೆಚ್ಚರಿಕೆ ಬರಲಿಲ್ಲಲಾ!

ಕ್ಷುದ್ರನೀಶ್ವರನಂತೆ ನಟಿಸುತ
ಜಗನೊಲಿಯಲು ಸಾಧ್ಯವೆ?
ಕಡಲಿನಗಲಕ್ಕೆಳಸಿ ಕೆರೆಯು ಸ-
ಮುದ್ರವಾಗಲು ಸಾಧ್ಯವೆ?

ಪ್ರೇಮನಾಮವನಿಟ್ಟ ಮಾತ್ರಕೆ
ಕಾಮಕಾದುದೆ ದಿವ್ಯತೆ?

ಕಲೆಯ ನೇಣಲಿ ಕೊಂದುಕೊಂಡರೆ
ಕೊಲೆಗೆ ಬರುವುದೆ ಭವ್ಯತೆ?

ತನ್ನ ನಾಗರಿಕತೆಯ ಕೆಸರಲಿ
ತಾನೆ ಮುಳುಗಿದಳಲ್ಲವೆ?
ತಿಳಿಯದಣುಗಿಯೆ ಕಲೆಯ ಹೆಸರಲಿ
ಹೊಲೆಯ ಹೊಗಳಿದಳಲ್ಲವೆ?

ರುಚಿಯೆ ಪಥ್ಯವೆ? ಸವಿಯೆ ಸತ್ಯವೆ?
ಸಂಯಮದ ತಪ ವಿಥ್ಯವೆ?
ಕ್ರಿಸ್ತಜೀವನವಾತ್ಮಹತ್ಯವೆ?
ಇಂದ್ರಿಯಂಗಳೆ ನಿತ್ಯವೆ?

ಚೆಲುವೆ ಕುಣಿದರೆ ಬರಿಯ ಕಲೆಯೇನ್?
ನಾಟ್ಯವೇಕಾ ನೋಟವೆ
ತರಳ ಕೀರ್ತಿಯ ಸುರೆಗೊಳ್ವುದು:
ರಸವೆ ಅಥವಾ ಬೇಟವೆ?

ಐಸಡೋರಾ, ಐಸಡೋರಾ,
ಮರುಗುವೆನು ನಾ ಬಯ್ಯೆನು;
ಅಯ್ಯೊ ಸೋದರಿ, ನನ್ನ ಸೋದರಿ,
ನಿನಗೆ ನಿಂದೆಯ ನೆಯ್ಯೆನು.

ನಿನಗೆ ವಂದಿಪೆ, ಐಸಡೋರಾ,
ನಿನ್ನ ಜೀವನ ಚರಿತೆಗೆ:
ನಿನ್ನ ಕೆಚ್ಚೆಗೆ, ಮತ್ತೆ ನೆಚ್ಚೆಗೆ,
ಸತ್ಯದಾ ತತ್ಪರತೆಗೆ.

ಐಸಡೋರಾ, ಐಸಡೋರಾ,
ಭವಿಸು ಭಾರತದೇಶಕೆ;
ಬಿಳಿಯ ಮಲ್ಲಿಗೆ ಮಡಿಯನುಡಿಸುವೆ
ಲಾಸ್ಯರಸದಾವೇಶಕೆ!

೨೧ – ೦೯ – ೧೯೩೮

* ಐಸಡೋರಾ ಡಂಕನ್ ಎಂಬ ಸುಪ್ರಸಿದ್ಧ ನಟರಾಣಿಯ ಆತ್ಮಕಥೆಯನ್ನು ಓದಿದ ಮೇಲೆ ಬರೆದುದು.

ಇನ್‌ವಿಜಿಲೇಷನ್* ಅಥವಾ ಒಂದು ಚಿತ್ರಕ್ಕೆ

ಎಂತಹ ರಸಕ್ಷಣಂ ಕ್ಷಣಿಕದಿಂ ಪಾರಾಗಿ

ಪಡೆದಿದೆ ಚಿರತ್ವಮಂ ವರ್ಣಶಿಲ್ಪಿಯ ಕಲಾ
ಮಂತ್ರದಿಂದೀ ಚಿತ್ರದಲ್ಲಿ! – ಮೂಡುವ ಬಿಸಿಲ್
ಚುಂಬಿಸಿದೆ ದೂರದ ಹಿಮಾಲಯದ ನರೆನವಿರ
ಶೃಂಗಮಂ; ಕಣಿವೆಯಡವಿಯ ತೋಳ್ಗಳಪ್ಪುಗೆಯ
ಸರಸದಲಿ ರತಿನಿದ್ರೆಗದ್ದಿದೆ ಸರೋವರಂ;
ಸರಸಿಯೆದೆಯಿಂ ಕೆಲಸಕ್ಕೋಸರಿಸಿದಂಚಲದ
ತೆರನ ಕೊಳದಂಚಿನಲಿ ಹರಿಣ ದಂಪತಿಯೆಂತು
ನಿಂತಿರುವುವದೊ ಚಲಚ್ಚರಣ ವಿನ್ಯಾಸದಿಂ
ಚಕಿತವೆಂಬಂತೆ! – ಪರಕಾಲ ದೇಶಂಗಳಂ
ಪೊಕ್ಕೆನ್ನ ಮನಕೆ ದೊರೆಕೊಂಡತ್ತು ವಿಪಿನಗಿರಿ
ಸುಂದರ ಕಲಾಯಾತ್ರೆ. ಮೂರು ಘಂಟೆಯ ದೀರ್ಘ
ನೀರಸ ಪರೀಕ್ಷೆಯಾ ಕಾಪು ನಿನ್ನಿಂದೆ, ಓ
ವರ್ಣಕೃತಿ, ರಸ ರಥೋತ್ಸವವಾಯ್ತು: ಧನ್ಯ ನೀಂ,
ಅಜ್ಞಾತವರ್ಣಶಿಲ್ಪಿ, ನಿನಗದೋ ನಮಸ್ಕಾರ!
ಚಿರಮಕ್ಕೆ ನೀನರಿಯದೀ ನಿನ್ನ ಉಪಕಾರ!

೧೯ – ೦೨ – ೧೯೪೦

* ಬೆಂಗಳೂರು ಇಂಟರ್ಮೀಡಿಯೆಟ್ ಕಾಲೇಜಿನ ದೊಡ್ಡ ಉಪನ್ಯಾಸ ಮಂದಿರದಲ್ಲಿ ಪರಿಕ್ಷೆ ಕಾವಲು ನಡೆಸುತ್ತಿದ್ದಾಗ, ಅಲ್ಲಿ ತಗಲುಹಾಕಿದ್ದ ಹತ್ತಾರು ಚಿತ್ರಗಳಲ್ಲಿ ಈ ಒಂದು ಪರಿಣಾಮಕಾರಿಯಾಗಿತ್ತು!

ಬಿನ್ನವತ್ತಳೆಯ ಮನ್ನಣೆಯಂತೆ!

“ಬಿನ್ನವತ್ತಳೆಯ ಮುನ್ನಣೆಯಂತೆ!
ಬಿರುದು ಬಾವಲಿಯ ಹೊಗಳಿಕೆಯಂತೆ!
ಸ್ತುತಿರೂಪದಿ ನೀಂ ಪಡೆದರೆ ನಿನ್ನ
ಸೇವೆಯ ಫಲವನು ಮಡಿಯುವ ಮುನ್ನ,
ಸ್ವರ್ಗದೊಳಿರುವುದೆ ಗಳಿಸಿದ ಪುಣ್ಯ?” –
ಆ ಪ್ರಶ್ನೆಯೆ ಸವೆದಿಹ ನಾಣ್ಯ:

“ಅಲ್ಲೇನಿದೆಯೋ ಬಲ್ಲವರಾರು?
ಇಲ್ಲೇ ಸಿಕ್ಕರೆ ಬಿಡುವವರಾರು?
ಇಂದಿನ ಜನತೆಯ ಮನಸಿನ ತೇರು
ಸಾಗುವ ದಾರಿಯೆ ಅವರಿಗೆ ಊರು!
ಮುಂದಿನ ಚಿಂತೆಯ ಹೊಟ್ಟನು ತೂರು:
ಇದೊಂದೇ ಅನ್ನಾಸಾರು!”

೧೨ – ೦೯ – ೧೯೪೧

ಹಾಡು, ನೇಗಿಲಯೋಗಿ!

ಹಾಡು, ನೇಗಿಲಯೋಗಿ:

ಗೊಬ್ಬರಕೆ ಮಿಗಿಲಾಗಿ
ಹಾಡೆ ಫಲವತ್ತಾಗಿ
ಹುಲುಸು ಬೆಳೆವುದು ರಾಗಿ!
ಹಾಡು, ನೇಗಿಲಯೋಗಿ!

ಹಾಡು, ನೇಗಿಲಯೋಗಿ:
ಹಾಡೆ ಹದಗೆಂಪಾಗಿ
ಹಲದ ಕುಳ ಹರಿತಾಗಿ
ಹೊಲದ ಹೃದಯಕೆ ತಾಗಿ

ದಯೆ ಚಿಮ್ಮುವುದು ರಾಗಿ:
ಹಾಡು, ನೇಗಿಲಯೋಗಿ!

ಹಾಡು, ನೇಗಿಲಯೋಗಿ:
ಎತ್ತಿಗುಲ್ಲಸವಾಗಿ
ದುಡಿಮೆ ಇಮ್ಮಡಿಯಾಗಿ
ಕಣಜ ಕಿಕ್ಕಿರಿಯಾಗಿ
ನೀನಾಗುವೈ ಭೋಗಿ:
ಹಾಡು, ನೇಗಿಲಯೋಗಿ!

೩೦ – ೦೫ – ೧೯೪೮

ಕುಳದ ಕಲಿಗೆ

ಬರಿಯ ಉಳುವ ಕುಳದ ಗೆರೆಯೆ?

ನಾಡ ಹಣೆಯ ಬರೆಹ ಬರೆವೆ!
ಹೊಲದ ಗಾಂಧಿ, ನೊಲದ ನಾಂದಿ,
ನೀನೆ ರಾಷ್ಟ್ರಶಕ್ತಿ:
ನೆಹರುಗೇನು ಕಡಮೆಯೇನು
ನಿನ್ನ ದೇಶಭಕ್ತಿ?
ಅವರೊ ಹೆಸರು; ನೀನೊ ಉಸಿರು
ನಾಡದೇವಿಗೆ:
ನಂದದೆಂದು ಕುಂದದಿರುವ
ನಂದಾ ದೀವಿಗೆ!

ಉಸಿರಿದ್ದರೆ ತಾನೆ ಹೆಸರು?
ಒಡಲಿದ್ದರೆ ತಾನೆ ಉಸಿರು?
ನಿನ್ನ ಡುಡಿಮೆ ನಮಗೆ ಭುಕ್ತಿ;
ನಿನ್ನ ಬಲದೊಳೆಮ್ಮ ಮುಕ್ತಿ.
ರಕ್ಷೆಗಿಹುದೆ ಹಿರಿಯ ಸೇನೆ?

ಅದರ ಬೆನ್ನಮೂಳೆ ನೀನೆ!
ನಿನ್ನ ಕೈಯೊಳಿಹುದು ಗೆಯ್ಮೆ;
ನಿನ್ನ ಕಾಲೊಳಿಹುದು ಮೆಯ್ಮೆ;
ಹೆಸರಿಲ್ಲದ ಹೆಸರರಿಯದೆ
ಹೆಸರೊಲ್ಲದ ನೀನೆ ಮಹಿಮೆ
ನಾಡ ದೇವಿಗೆ:
ನಂದದೆಂದು ಕುಂದದಿರುವ
ನಂದಾ ದೀವಿಗೆ!
ಅನ್ನರಣದ ಭಾರತದಲಿ
ಕುರಕ್ಷೇತ್ರದಗ್ನಿಯಲಿ
ಹಲಾಯುಧದ ಭೀಷ್ಮಕಲಿ,
ಜಗದ ಸೊಗಕೆ ಬೇಳ್ದ ಬಲಿ,
ನಮೊ ನಿನಗೆ, ಧನ್ಯ ಹಲಿ!

೦೮ – ೦೩ – ೧೯೫೦

ಬ್ರಾಹ್ಮನಾಯಿ – ಶೂದ್ರಕೋಳಿ*

೧

ಶೂದ್ರಕೋಳಿ ಮೇಯುತಿತ್ತು
ಗಲ್ಲಿಯಲ್ಲಿ;
ಬ್ರಾಹ್ಮನಾಯಿ ಹೊಂಚುತಿತ್ತು
ಅಲ್ಲಿ ಇಲ್ಲಿ.
ಶೂದ್ರಕೋಳಿಗೇನು ಗೊತ್ತು,
ಪಾಪ, ನಾಯಿ ಬ್ರಾಹ್ಮ ಎಂದು?
ತಮ್ಮ ಮನೆಯ ನಾಯಿಯಂತೆ
ಎಂದು ಸುಮ್ಮ ಮೇಯುತಿತ್ತು.

೧

ಬ್ರಾಹ್ಮನಾಯಿ ಅಪ್ಪಟ ಕಂತ್ರಿ.
ಆದರೇನು? ಕಪಟ ಕುತಂತ್ರಿ!
ಕೊರಳಿನಲ್ಲಿ ಜನ್ನ ಪಟ್ಟೆ;
ಒಡಲಿನಲ್ಲಿ ಖಾಲಿಹೊಟ್ಟೆ!
ಮೆಲ್ಲ ಮೆಲ್ಲ ಸುಲಿದು ಸುತ್ತಿ
ಹತ್ತೆ ಬಂತು;
ಸಾಧು ಎಂದು ಶೂದ್ರಕೋಳಿ
ನೋಡೆ ನಿಂತು,
ಹಾರಿ ನೆಗೆದು ಹಿಡಿದುಕೊಂಡು
ಓಡಿ ಹೋಯ್ತು!
ಪಾರ್ವವೀಡಿನೊಂದು ಗೋಡೆ
ರಕ್ಷೆಯಾಯ್ತು:
ಪಾರ್ವನಾಯ್ಗೆ ಶೂದ್ರಕೊಳಿ
ಭಕ್ಷವಾಯ್ತು!

೨

ಮುರಿಯತನದಿ ಮೊದಲುಗೊಂಡು
ಸಾಕಿ ಸಲಹಿ ಒಲಿದ ತನ್ನ
ಪುಟ್ಟ ಮುದ್ದು ಹುಂಜಗಾಗಿ,
ಕರುಣ ತುಂಬಿದೆದೆಯ ದೇವಿ,
ಗೊಳೋ ಎಂದು ಹುಡುಗಿಯೊಂದು
ಅಳುತಲಿತ್ತು.
‘ಶುದ್ಧ ಶೂದ್ರ ಹುಡುಗಿ’ ಎಂದು
ಹಾರ್ವನೊಡನೆ ಹಾರ್ತಿ ನಿಂದು,
ಕೇಲಿಗಾಗಿ ಗೇಲಿ ಮಾಡಿ
ಬೀದಿ ಬಾಗಿಲಲ್ಲಿ ಕೂಡಿ
ಬ್ರಾಹ್ಮವೃಂದ ಚೆಂದ ನೊಡಿ
ನಗುತಲಿತ್ತು!

೧೦ – ೦೬ – ೧೯೫೦

* ಸಂಭವಿಸಿದ ಒಂದು ಘಟನೆಯಿಂದ ಪ್ರೇರಿತ.

ಶ್ರೀ ರಾಮಾಯಣ ದರ್ಶನಂ

ಪಂಪನಾ ಗಾಂಭೀರ್ಯ,

ರನ್ನ ವೀರ್ಯ,
ಜನ್ನನಾ ಋಜು ಕುಶಲ
ಕಥನ ಕಾರ್ಯ,
ನಾಗವರ್ಮನ ಕಲ್ಪನಾ
ಕಾದಂಬರೀ ಚಂದ್ರಿಕಾ
ಸ್ವಾಪ್ನ ಸೌಂದರ್ಯ,
ರಾಘವಾಂಕನ ನಾಟಕೀಯ ಚಾತುರ್ಯ,
ನಾರಣಪ್ಪನ ದೈತ್ಯರುಂದ್ರತಾ ದಿವ್ಯಧೈರ್ಯ,
ಲಕ್ಷ್ಮೀಶನಾ ಮೃದುಲ ಮಂಜುಲ ನಾದಮಾಧುರ್ಯ,
ರತ್ನಾಕರನ ಯೋಗದೃಷ್ಟಿಯ ಸಾಗರೌದಾರ್ಯ,
ಸಕಲ ಛಂದಸ್ ಸರ್ವ ಮಾರ್ಗ ಶೈಲಿಗಳಮರ ಐಶ್ವರ್ಯ,
ಸರ್ವವೂ ಸಂಗಮಿಸಿದೀ 'ದರ್ಶನಂ' ತಾನಕ್ಕೆ ಕೃತಿಗಳಾಚಾರ್ಯ!

೨೨ – ೦೭ – ೧೯೫೧

ಕುಲಪತಿಗೆ ಹಕ್ಕಿಯ ಹರಕೆ

ಓ ಹಕ್ಕಿ,

ನಿನ್ನ ಸವಿಯ ಉಲಿಯನಾಲಿಸಲ್ಕೆ
ನನಗೆ ಈಗ ಹೊತ್ತೆ ಇಲ್ಲ:
ನಿನಗೆ ಗೊತ್ತೆ ಇಲ್ಲಾ?
ನನಗೀಗ ದೊಡ್ಡ ಹುದ್ದೆಯಾಗಿರುವುದಲ್ಲಾ:
ನಾನೀಗ
ಮೈಸೂರು ವಿಶ್ವವಿದ್ಯಾನಿಲಯದ
ವೈಸ್‌ಛಾನ್ಸಲರ್ ಕಣಾ!!

ಹಕ್ಕಿ ಮೆಲ್ಲನುಲಿಯಿತು:
"ಏನು ನಷ್ಟ! ಎಂಥ ಕಷ್ಟ!
ಅಯ್ಯೊ ಪಾಪ ದುರಾದೃಷ್ಟ!
ಕವಿ ಆದನೆ ರಸಭ್ರಷ್ಟ?"

ಅಯ್ಯೊ ಬೆಪ್ಪು ಹಕ್ಕಿ,
ಹೇಳುತಾರೆ ಎಲ್ಲ ಮಂದಿ:
"ಏನದೃಷ್ಟ! ಎಂಥ ಪುಣ್ಯ!
ಎಂಥ ಸ್ಥಾನ! ಎಷ್ಟು ಗಣ್ಯ!
ಕುಲಪತಿ! ಕುಲಪತಿ!
ವಿಶ್ವವಿದ್ಯಾ ಸ್ಥಾನಪತಿ!
ಪಡೆದ ಕವಿಯೆ ನಿಜಕು ಸುಕೃತಿ!"

ಹಕ್ಕಿ ಮೆಲ್ಲನುಲಿಯಿತು:
"ಸ್ಥಾನಪತಿ! ಸ್ಥಾನಪತಿ!
ಎಯ್ಯೋ ಎಂಥ ದುರ್ಗತಿ,
ಈ ರಸಚ್ಯುತಿ!
ಕವಿಗೊದಗಿತೆ ಈ ಕೀಳ್ಗತಿ?
ತಾನಾದನೆ ಕುಲಪತಿ?"

ಹಕ್ಕಿ, ನಿನಗೆ ಬುದ್ಧಿಯಿಲ್ಲ.
ಈಗ ನನ್ನ ಕೆಲಸವೆಲ್ಲ
ಬರಿಯ ಹೆಸರು ಬರೆವುದೊಂದೆ:
ಚಿಂತೆಯಿಲ್ಲ. ಚರ್ಚೆಯಿಲ್ಲ.
ಕಡೆಗೆ
ಆಲೋಚನೆಯ ಗೋಜೂ ಇಲ್ಲ.
ವ್ಯಾಕರಣ, ಶೈಲಿ, ಛಂಧಸ್ಸು
ಯಾವುದರ ಪೀಡೆಯೂ ಇಲ್ಲ.
ಗದ್ಯ ಪದ್ಯ ಭೇದವಿಲ್ಲ:
ಹೃದ್ಯ ಬರೆದುದೆಲ್ಲ! –
ಆಲಸ್ಯವೊ? ಅವಸರವೋ?
ಅಜ್ಞಾನವೊ? ಅವಿವೇಕವೊ?
ಅನುಕೂಲದ ಈ ರಿತಿಗೆ
ನಿನಗೊಂದು ಹೆಸರು ಬೇಕಾದರೆ,
ಬೇಕಾದರೆ, ಬೇಕೇ ಬೇಕಾದರೆ,
‘ನವ್ಯ’ ಎಂದು ಕರೆ!
‘ನವ್ಯ’ ಎಂಬದೂ ಹಳೆಯದಾದರೆ
‘ನವೋನವ್ಯ!’ ‘ಭವ್ಯ!’ ‘ದಿವ್ಯ!’
ಏನು ಬೇಕಾದರೂ ಕರೆ.
ಅಂತೂ ಈಗ
ಹೆಸರು ಕೊರೆವುದೊಂದೇ
ನನಗೆ ರಸಕ್ರಿಯೆ!
ಹೆಸರು! ಹೆಸರು! ನನ್ನ ಹೆಸರು!
ದಾಸರೇನು ಹೇಳಿದ್ದರು
‘ನೀನ್ಯಾಕೋ ನಿನ್ನ ಹಂಗ್ಯಾಕೋ
ನಿನ್ನ ನಾಮದ ಬಲವೊಂದಿದ್ದರೆ ಸಾಕೋ!’
ಇಂದು ನನಗೆ ತಿಳಿಯಿತದರ ಸತ್ಯ:
ಹೆಸರಿಗಿರುವ ಸತ್ತ್ವ ಮೇಣ್ ಮಹತ್ತ್ವ!
ಕಡೆಗೆ ಇಡಿಯ ಹೆಸರು ಕೂಡ ಬೇಡ;
ಮೊದಲಕ್ಕರದ ಚಿಕ್ಕರುಜುವೆ

ಸಾಕೋ ಸಾಕು
ಹಕ್ಕಿಗರ್ಥವಾಗಲಿಲ್ಲ.
ನವ್ಯಮಾರ್ಗವರಿವ ಶಕ್ತಿ ಅದಕ್ಕಿನ್ನೂ ಬಂದಿಲ್ಲ!

ಉಲಿಯಿತಿಂತು ಮತ್ತೆ
ತನಗೆ ತಾನೆ ಎಂಬಂತೆ:
"ಸ್ಥಾನಪತಿ! ಕುಲಪತಿ!
ಅಯ್ಯೋ ಎಂಥ ದುರ್ಗತಿ,
ಓ ದೇವಿ ಸರಸ್ವತಿ,
ಎಂತಾದರೂ ಕವಿಯ ಪೊರೆ;
ಅವನಿಗೊದಗದಿರಲಿ
ಈ ರಸಚ್ಯುತಿ!
ನನ್ನ ಉಲಿಯನಾಲಿಸಲೂ
ಸಮಯವಿರದ ದುರ್ಗತಿ!"

೨೧ – ೦೯ – ೧೯೫೬

ಅಗ್ನಿ ಶೀತ ಚರಣಕೆ*

ಮನುಜ ರೂಪವ ಧರಿಸಿ ಧರೆಗಿಳಿದು ಬಂದಿರುವ

ದೇವಸೂರ್ಯ ಕರುಣ;
ಕವಿದಿರುವ ಕತ್ತಲೆಯೊಳೊಂದೆ ಸಂಚರಿಸುತಿದೆ
ಅಮೃತ ಚಂದ್ರಕಿರಣ:
ಪಾದಯಾತ್ರೆಯೊಳಿರುವ ಶ್ರೀ ವಿನೋಬನ ಅಮರ ಅಗ್ನಿಶೀತಚರಣ! –
ಇಂದು ವಾಮನನಂತೆ ಬಂದೀ ತ್ರಿವಿಕ್ರಮಗೆ
ಕವಿಯ ನಮನ ಅನೃಣ!

೧೩ – ೦೯ – ೧೯೫೭

---

* ತಾ. ೧೩-೯-೧೦೫೭ರಲ್ಲಿ ಕೊಡಗು ಜಿಲ್ಲೆಯ ಆನೆಚೌಕುರಿನ ಫಾರೆಸ್ಟ ಲಾಡ್ಜ್‌ನಲ್ಲಿ ಶ್ರೀ ವಿನೋಬಾಜಿಯನ್ನು ಸಂದರ್ಶಿಸುವ ಸುಯೋಗ ಲಭಿಸಿತು, ಬೆಳಿಗ್ಗೆ ೯ ರಿಂದ ೧೦ ರವರೆಗೆ. ಶ್ರೀ ರಾಮಾಯಣದರ್ಶನಂ ಒಂದು ವಿಶೇಷ ಪ್ರತಿಯನ್ನು ಕಾಣಿಕೆಯಾಗಿ ಕೊಟ್ಟೆ, ಅದರಲ್ಲಿ ಬರೆದ ಕವನವಿದು.

‘ಉದಯರವಿ’ಯಲ್ಲಿ ಸರ್ವೋದಯ ರವಿ!*

ಹೇ ಜಗದ್ ದೀನಬಂಧು,

ಮನೆಯ ಕ್ಷೇತ್ರವಾಯಿತಿಂದು
‘ಉದಯರವಿ’ ಗೆ ನೀನು ಬಂದು:
ಕೆರೆಯೆ ಆಯ್ತು ಮಹಾಸಿಂಧು,
ಪೂಜ್ಯ ಓ ತಪೋಧನ!
ಪಾದಯಾತ್ರೆಯಮೃತರೇಖೆ
ಮನೆಯ ಮೇಲೆ ಹಾಯ್ದುದಕ್ಕೆ
ನಿನಗನಂತ ವಂದನಾ,
ಮುಹುರನಂತ ವಂದನಾ

೨೫ – ೦೯ – ೧೯೫೭

---

* ಶ್ರೀ ವಿನೋಬಾಜಿ ನಮ್ಮ ಮನೆ ‘ಉದಯರವಿ’ ಗೆ ಬಂದ ಸಂದರ್ಭದಲ್ಲಿ.

ಲಾರಿ

ನಿನ್ನ ತಾಯಿಗಾಗಿ, ಮಗೂ,

ದಾರಿಬಿಟ್ಟು ದೂರ ಸರಿ:
ಹಿಂದೆ ನುಗ್ಗಿ ಬರುತಲಿದೆ

ಚಕ್ರಮಾರಿ
ಲಾ . . . . ರಿ! – – –

ಕುಡಿದಿರುವನೊ ಮುನಿದಿರುವನೊ
ಹಸಿದಿರುವನೊ ಸೊಕ್ಕಿರುವನೊ
ಆ ಚಕ್ರಧಾರಿ ಸಾರಥಿ?
ಯಾರ ಕೂಡೆ ಜಗಳವಾಡಿ
ಆಕ್ಸಿಲ್ರೇಟರ್ ಒತ್ತುತಿಹನೊ?
ಯಾರ ನೆನೆದು ಮೈಯ ಮರೆತು
ಯಂತ್ರಕಿಂತ ಯಂತ್ರವಾಗಿ
ತನ್ನ ಮನುಜತನವ ನೀಗಿ
ನುಗ್ಗುತಿಹನೊ ಡ್ರೈವರು:
ಬ್ರೇಕು ಸವೆದು ಹಿಡಿಯದಿಹುದೊ?
ಬ್ರೇಕೆ ಇದೆಯೊ ಇಲ್ಲವೊ?
ಅಥವಾ ಬ್ರೇಕು ರುಪಾಯಾಗಿ
ಇನಿಸ್ಪೆಕ್ಟ್ರ ಜೇಬಿನಲ್ಲಿ
ಅಪಾಯವಿಲ್ಲದಿರುವುದೊ?

ನಿನ್ನ ತಾಯಿಗಾಗಿ, ಮಗೂ,
ದಾರಿಬಿಟ್ಟು ದೂರ ಸರಿ:
ಸ್ಕೂಲಿನಿಂದ ಬರುವನೆಂದು
ಕಾಫಿತಿಂಡಿಗಳನು ಮಾಡಿ,
ಕಾತರತೆಯ ಕಣ್ಣ ತೆರೆದು
ಬಾಗಿಲೆಡೆಯೆ ಹೊಸ್ತಿಲಲ್ಲಿ
ನಿಂತು ನಿನ್ನ ನಿದಿರುನೋಡಿ
ಹಾದಿ ಕಾಯುತಿರುವ ಆ
ನಿನ್ನ ತಾಯಿಗಾಗಿ, ಮಗೂ,
ದಾರಿಬಿಟ್ಟು ದೂರ ಸರಿ:
ಹಿಂದೆ ನುಗ್ಗಿ ಬರುತಲಿದೆ
ಚತುಶ್ಚಕ್ರ ಘೋರ ಮಾರಿ,
ಲಾಆಆಆ ರಿಈಈಈ!

೦೫ – ೦೪ – ೧೯೫೯

ಪ್ರಯೋಜನ

ತಂಬಿಗೆ ಕೇಳಿತು ಬಿಂದಿಗೆಯ:

“ಓ ನೀರು ತುಂಬಿದ ಬಿಂದಿಗೆ,
ಸಹರಾ ಮರುಭೂಮಿಗೆ ಹೊರಟಿದ್ದೀಯಾ?”
ದೊಡ್ಡ ಬಿಂದಿಗೆ ಹೇಳಿತು ಹಿಗ್ಗಿ:
“ಹೌದು, ಮಾಡಲದನು ಫಲವತ್ತಾಗಿ!”
ಪುಟ್ಟ ತಂಬಿಗೆ ತನ್ನ ಸಂದೇಹವನು
ಒರೆಯಿತಿಂತು:

“ಹೇಳುತ್ತಾರೆ,
ಅದರ ವಿಸ್ತೀರ್ಣ ಸಾವಿರಾರು ಚದರಮೈಲಿಗಳಂತೆ;
ಅಲ್ಲಿ ಮಳೆಯಿಲ್ಲ; ಬರಿಯ ಉರಿಬಿಸಿಲಂತೆ;
ಹಸುರು ಎಸಳಿಲ್ಲದಿಹ ಬರಿಯ ಮರಳುಗಾಡಂತೆ!
ಒಂದಲ್ಲ ಎರಡಲ್ಲ
ನೂರುಸಾಗರಗಳೆ ಅದರ ಮೇಲುಕ್ಕಿದರೂ
ಇಂಗಿಹೋಗುವ ಬಡಬ – ಬೇಗೆ ಅದಕ್ಕಂತೆ!
ನೀನು
ಒಂದೆರಡು ಕೊಡ ನೀರು ತುಂಬಿರುವ ಬಿಂದಿಗೆ,
ನನಗೆನಿತು ಹಿರಿಯನಾದರೂ,
ಕ್ಷಮಿಸು,
ಕೋಟಿಯೋಜನದಗಲ ಮರುಭೂಮಿಯನು
ಮಾಡಬಲ್ಲೆಯ ಹೇಳು ಫಲವತ್ತಾಗಿ?
ಹಿರಿಯ ಆ ವ್ಯರ್ಥಸಾಹಸವನುಳಿದು,
ನಮ್ಮ ಈ ಚಿಕ್ಕ ತೋಟದಲ್ಲಿಯೆ ನಿಂತು
ಈ ಸಣ್ಣ ಗಿಡಗಳಿಗೆ ನೀರೆರೆದರೆ
ಅಲ್ಪವಾದರೂ, ಅಣ್ಣಾ, ಸಫಲವಲ್ತೆ?”
ತಂಬಿಗೆಯ ನುಡಿಗೇಳ್ದು

ಹಿತ್ತಳೆಯ ಬಿಂದಿಗೆ ರಬ್ಬರಿನಂತುಬ್ಬಿ
ನಕ್ಕಿತು ತಿರಸ್ಕರಿಸಿ:
“ಬೆಪ್ಪೆ,
ಈ ಕೊಂಪೆಯಲಿ ನನ್ನ ಸಾಹಸವ ನೋಡುವವರಾರು?
ಅದನು ನೋಡಲು ನೆರೆಯಲಾದರೂ ನಾಲ್ಕುಜನ ಇಹರೆ ಇಲ್ಲಿ?
ಇಲ್ಲಿರುವ ನಿನ್ನ ಪತ್ರಿಕೆಯೊ ಮೂರು ಕಾಸಿನದು!
ಅದಕಿರುವುದೊಂದೆ ಹಾಳೆ!
ಅದಕೆ ಚಂದಾದಾರರೂ
ಬೆರಳೆ ಮಿಗುವುವು ಎಣಿಸೆ!
ಸಹರಾಕೆ ನೀರೆರೆಯೆ ನಾ ಹೊರಟರೆ
ಸುದ್ದಿ ಹಬ್ಬುವುದು ದೇಶ ದೇಶದಲಿ!
ಬೇರೆ ಬೇರೆಯ ಭಾಷೆಯ ಮಹಾ ಪತ್ರಿಕೆಗಳಲಿ,
(ನಿನ್ನ ಮೂರುಕಾಸಿನ ಒಂದೆ ಹಾಳೆಯ ಪತ್ರಿಕೆಗಳಲ್ಲ!)
ಪುಟ ಪುಟಗಳನೆ ತುಂಬುವುವು ನನ್ನ ಚಿತ್ರಗಳೆ!
ಬರೆವರು ಮಹಾಕವಿಗಳೆನ್ನನೆಯೆ ಹಾಡಿ!
ಹೋಲಿಸುವರೆನ್ನನು ಭಗೀರಥಗೆ ಎಣೆಮಾಡಿ!” –

“ಆದರೇನು ಪ್ರಯೋಜನ, ಅಣ್ಣಾ?
ನಿನ್ನೆರಡು ಕೊಡ ನೀರಿನಲಿ ಫಲವತ್ತಾಗುವುದೆ ಸ ಹ ರಾ?” –

“ಅದು ಫಲವತ್ತಾದರೆಷ್ಟು? ಆಗದಿದ್ದರೆಷ್ಟು?
ನನ್ನ ಹೆಸರಾಗುವುದು ಲೋಕಪ್ರಸಿದ್ಧ!
ಅದಕಿಂತಲೂ ಯಾವುದಯ್ಯಾ – ‘ಪ್ರಯೋಜನ’?”

೧೦ – ೦೪ – ೧೯೫೯

ದ್ವಿತೀಯ ಲೂನಿಕ್

೧

ಚಂದ್ರನ ತಲುಪಿತೆ ರಷ್ಯದ ರಾಕೆಟ್,
ದ್ವಿತೀಯ ಲೂನಿಕ್?
ನನಗೇತಕೆ ಈ ರೋಮಾಂಚ?
ಈ ಉನ್ಮೇಷ?
ಈ ಉನ್ಮಾದ?
ಈ ಆನಂದ?

೨
ಮಾನವ ಸಾಹಸ ಮುಗಿಲಿಗೆ ತಿರುಗಿತೆ?
ನಾಶದ ಮಾರ್ಗವ ತೊರೆದೀತೆ?
ಶುಕ್ರಗ್ರಹ ನಿವಾಸಿಗಳಲ್ಲಿ
ನಮ್ಮನು ಸಂಧಿಸಿಯಾರೆ?
ಗ್ರಹ ಮಂಗಳದಿಂ ಬಂದಾ
ಮಹನ್ ಮಾತೃನೌಕೆ
ಸ್ವಾಗತಿಪುದೆ ಮರ್ತ್ಯರನಲ್ಲಿ?
ದಿಟವೋ? ಸೆಟೆಯೋ ಮುಂದೇನೋ?
ಪೀಡಿಸುತಿದೆ ಈ ಭೂ-ಮನವನು ಒಂದಾವುದೊ
ಭೂಮ ನಿರಿಕ್ಷೆ!

೩
ಅರಿಜೋನ ಮರುಭೂಮಿ ಅಂದು ಪಲವತ್ತಾಯ್ತು
ಅಯ್‌ಡಮ್‌ಸ್ಕಿ ಶುಕ್ರಗ್ರಹ ನಿವಾಸಿಯನು
ಸಂಧಿಸಿದ ಆ ಭವ್ಯದಿನದಂದು!
ಮತ್ತೊಮ್ಮೆ ಇಂದು
ಮಾನವನಾಶೆಯ ಮರುಭೀಮಿಗೆ ಮಳೆ ಹೊಯ್ದಂತಾಯ್ತು
ಈ ಸುದ್ದಿಯ ಕೇಳಿ:
ಈ ಸುದ್ದಿಯ ಮುಂದೆ ಉಳಿದೆಲ್ಲವು ಸಪ್ಪೆ!

ಚೀಣದ ಗಡಿ ಆಕ್ರಮಣವೂ ಬರಿ ಬಾವಿಯ ಕಪ್ಪೆ!
ಅಮೇರಿಕಾಕ್ಕೆ ಕ್ರುಶ್ಚೇವ್ ಕೊಡಲಿಹ ಬೇಟೆಯು ಕೂಡ-ಹಿಪ್ಪೆ!

೧೪ – ೦೯ – ೧೯೫೯

ಯಾರೆಂದು ಊಹಿಸಿ!*

ಅಂದೋ?

ಹಿಂದಕ್ಕೆ ಗುರುವಿದ್ದ, ಮುಂದಕ್ಕೆ ಗುರಿಯಿತ್ತು;
ನುಗ್ಗಿದುದು ಮುಂದೆ ಧೀರದಂಡು!
ಇಂದೊ?
ಹಿಂದಕ್ಕೆ ಗುರುವಿಲ್ಲ, ಮುಂದಕ್ಕೆ ಗುರಿಯಿಲ್ಲ;
ಮುಗ್ಗುತಿದೆ ಮಧ್ಯೆ ಹೇಡಿಹಿಂಡು!

೧೨ – ೧೨ – ೧೯೫೯

---

* ಯುವಜನೋತ್ಸವದಲ್ಲಿ ಗಲಭೆಯೆಬ್ಬಿಸಿದ ಸಂದರ್ಭದಲ್ಲಿ.

ಹಿಮಾಲಯಕ್ಕೆ ಸಹ್ಯಾದ್ರಿ*

ನಿನಗೆ ಹಮ್ಮೆಯೆ, ಹಿಮಗಿರಿ?

ಗೌರಿಶಂಕರ ಮತ್ತು ಧವಳಗಿರಿ
ಲೋಕದ ಮಹೋನ್ನತ ಶಿಕರಗಳನಾಂತ ಶಿಖರಿ
ಎಂದು ಹೆಮ್ಮೆಯೆ, ಹಿಮಗಿರಿ?
ಅಂದು
ನಿನ್ನ ನೆತ್ತಿಯ ಮೆಟ್ಟನೆ?
ಆ ಷರ್ಪನೆ

ವಿನಯದೋಲೆಯ ಕಟ್ಟನೆ? –
ಸಾಲದೇ?

ಚೇಣಿಯರ ಕೈಯಿಂದ
ನಿನ್ನ ರಕ್ಷಿಸಲಿಂದು ಬೇಕಾಯ್ತು ಸಹ್ಯಾದ್ರಿ!
ನಿನಗೆ ಕೋಡೆರಡುಂಟೆ
ಮೇಘಚುಂಬಿ?
ನನಗು ಕೋಡೆರಡುಂಟು
ಗಗನ ಚುಂಬಿ!
ಹೆಸರುಗಳನೂ ಹೇಳಬೇಕೆ
ತಿಳಿದಿರಲು ಸಕಲ ಲೋಕಕ್ಕೆ?
ಅದು ವಿನಯವೂ ಅಲ್ಲ;
ಕವಿಸಮಯವೂ ಅಲ್ಲ;
ಧ್ವನಿಗೆ ವಾಚ್ಯದ ಊರೆ ಏಕೆ? –
ಸಾಕೆ?

೧೫ – ೧೨ – ೧೯೫೯

---

* ಯುವಜನೋತ್ಸವ ಶಿಬಿರಕ್ಕೆ ಭೇಟಿಕೊಟ್ಟ ಮಹಾಸೇನಾನಿ ಜ|| ತಿಮ್ಮಯನವರ ಗೌರವಾರ್ಥವಾಗಿ.

ಬೀಳ್ಕೊಡಿಗೆ*

ಅಂತೂ ಇಂತೂ

ತುದಿಮುಟ್ಟಿತು ಶಿಬಿರೋತ್ಸವ ಎಂತೂ!
“ಶಿವಾಸ್ತೇ ಪಂಥಾನಸ್ಸಂತು!”

ದಡಬಿಟ್ಟಿತು ದೋಣಿ;
ಕಿರಿದಾಗುತ್ತಿದೆ,

ಮಸುಕಾಗುತ್ತಿದೆ
ಭೂ ಕಾನನ ಪರ್ವತಶ್ರೇಣಿ,
ಅನುರಣಿಸಿರೆ ಜಯಕಾರ
ಸರಿಯುತ್ತಿದೆ ದೂರ,
ದೂರ ದೂರ ದೂರ,
ಸುಖಸುಂದರ ತೀರ. …..!
ನಮಸ್ಕಾರ, ಓ, ನಮಸ್ಕಾರ?
“ಶಿವಾಸ್ತೇ ಪಂಥಾನಸ್ಸಂತು!”
“ಶಿವಾಸ್ತೇ ಪಂಥಾನಸ್ಸಂತು!”
“ಶಿವಾಸ್ತೇ ಪಂಥಾನಸ್ಸಂತು!”

೧೫ – ೧೨ – ೧೯೫೯

---

* ಯುವಜನೋತ್ಸವದ ಮುಕ್ತಾಯದಲ್ಲಿ.

ಕನ್ನಡ ಡಿಂಡಿಮ*

ಬಾರಿಸು ಕನ್ನಡ ಡಿಂಡಿಮವ,

ಓ ಕರ್ನಾಟಕ ಹೃದಯಶಿವ!

ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವರನು ಕೂಡಿಸಿ ಒಲಿಸು,
ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು;
ಒಟ್ಟಿಗೆ ಬಾಳುವ ತೆರದಲಿ ಹರಸು!
ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!

ಕ್ಷಯಿಸೆ ಶಿವೇತರ ಕೃತಿಕೃತಿಯಲ್ಲಿ
ಮೂಡಲಿ ಮಂಗಳ ಮತಿಮತಿಯಲ್ಲಿ;
ಕವಿ ಋಷಿ ಸಂತರ ಆದರ್ಶದಲಿ

ಸರ್ವೋದಯವಾಗಲಿ ಸರ್ವರಲಿ!
ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!

೨೮ – ೦೪ – ೧೯೬೦

---

* ‘ಮಾನಸ ಗಂಗೊತ್ರಿ’ಯ ಪ್ರಾರಂಭೋತ್ಸವ ಸಂದರ್ಭದಲ್ಲಿ.

ಮಹತ್ತರ ಸುದ್ದಿ

ಇತ್ತ

ಡಕಾಯಿತರು ಮೂರು ಮಂದಿ
ಬಂದು ವಿನೋಬರ ಪ್ರಾರ್ಥನಾ ಸಭೆಗೆ
ಅವರ ಕಾಲುಮುಟ್ಟಿ ನಮಿಸಿ
ಶರಣಾದರಂತೆ!
ಪತ್ರಿಕೆಗಳು ಚಿಕ್ಕಕ್ಕರದಲಿ ಹ್ರಸ್ವವಾಗಿ ಮುದ್ರಿಸಿವೆ,
ಒಂದು ಮೂಲೆಯಲ್ಲಿ!

ಅತ್ತ ಕ್ರುಶ್ಚೇವ್, ಐಕ್, ಮಾಕ್ಮಿಲನ್, ಡಿಗಾಲ್
ಭಿನ್ನಾಭಿಪ್ರಾಯದಾ ಇಕ್ಕುಳಕೆ ಸಿಕ್ಕಿ
ಪ್ಯಾರಿಸ್ಸಿನ ಶೃಂಗಸಭೆ ವಿಫಲವಾಯಿತಂತೆ!
ಪತ್ರಿಕೆಗಳೆಲ್ಲ ದಪ್ಪಕ್ಕರದಲಿ ದೀರ್ಘವಾಗಿ
ವರದಿ ಮಾಡಿರುವ ಪ್ರಮುಖ ಸುದ್ದಿ!

ಕವಿಗೆ ಕಕ್ಕಾವಿಕ್ಕಿ:
ಯಾವುದು ಮಹತ್ತರ?. ….
ಅರ್ಥವಿಲ್ಲದ ಪ್ರಶ್ನೆಗೆ
ಸುಮ್ಮನಿರುವುದೆ ಉತ್ತರ!

೧೯ – ೦೫ – ೧೯೬೦

ಇದು ಕಲಿಯ ಯುಗವೆ?

"ಅದೇನದಾ ಗಲಭೆ?"

"ಮುರಿದು ಬಿತ್ತಂತೆ ಶೃಂಗಸಭೆ!"
"ಹಾಳಾಯ್ತೆ ಶೃಂಗಸಭೆ?"
"ಆದರಾಯಿತು; ಇತ್ತ ನೋಡು:
ಹೊಳೆಯುತಿದೆ ಶ್ರೀಶಿಲುಬೆ, ನಮನ ಮಾಡು"!
"ಇದೇನಿದೀ ಬರಿ ಶಿಲುಬೆ?
ಕ್ರಿಸ್ತನೆಲ್ಲಿ?"

"ಕಾಣಲ್ಲಿ:
ಸಂಚರಿಸುತಿಹನಾ ಡಕಾಯಿತರ ನಾಡಿನಲ್ಲಿ,
ಮಧ್ಯಪ್ರದೇಶದಾ ಕೊರಕು ದುರ್ಗಮದ ಕಾಡಿನಲ್ಲಿ;
ಒಳ್ಳಿತನೆ ಕಡೆದೆಬ್ಬಿಸುತ ಕೇಡಿನಲ್ಲಿ!
ಧರ್ಮಘಂಟಾನಾದ ಬಾಜಿಸಿದೆ, ಅದೊ ಕೇಳಿ,
ಲೋಕ ಲೋಕಕೆ ಮಿಂಚೆ ಮೋದರೋಮಾಂಚನ!
ಶ್ರೀವಿನೋಬರ ಪಾದಯಾತ್ರೆಯ ಧವಳಧೂಳಿ
ದೇವಚಕ್ಷುಗಳನುನ್ಮೀಲಿಸಿದೆ – ಜ್ಞಾನಾಂಜನ!

ಅಂದು ದುಷ್ಟವ್ಯಾಧ ವಾಲ್ಮೀಕಿಯಾಗಿ
ಮತ್ತೆ ಅಂಗುಲಿಮಾಲ ಭಿಕ್ಷುವಾಗಿ
ದಾರಿತೋರಿದರು ಸತ್ಯಯುಗಕೆ,
ಹೆಗಲನಿತ್ತರು ಧರ್ಮನೊಗಕೆ,
ಕಣ್ಣಾದರಯ್ ಕುರುಡು ಜಗಕೆ!
ಆ ಪವಾಡವನಿಂದು ಮತ್ತೆ
ಕಂಡ ಹಿಗ್ಗಿಗೆ. .... ಅತ್ತೆ!
ಹೇಳು, ಮಗುವೆ,
ಇದು ಕಲಿಯ ಯುಗವೆ?"*

೧೨ – ೦೫ – ೧೯೬೦

* ಡಕಾಯಿತರು ಗುಂಪುಗುಂಪಾಗಿ ಶ್ರೀ ವಿನೋಬಾಜಿಗೆ ಸಕಲಾಯುಧ ಸಮೇತರಾಗಿ ಸಕುಟುಂಬ ಸಮೇತರಾಗಿ ಶರಣಾಗುತ್ತಿದ್ದಾರೆ ಎಂಬ ಪತ್ರಿಕಾವಾರ್ತೆ.

ಅಲ್ಲಿ – ಇಲ್ಲಿ*

ಆಲಿಸಿದೆ:

‘ಚತುರ್ದಶಿ;
ಶರನ್ಮೇಘ ಮಂದ ಶಶಿ;
ನಿಶ್ಯಬ್ದಮಿತ್ತು ನಿಶಿ,’
ಆಲಿಸಿದೆ:
ಒಂಟಿಕೊಪ್ಪಲಿನ ‘ಉದಯರವಿ’ಯಲಿ ಕುಳಿತು
ನ್ಯೂಯಾರ್ಕಿನಲಿ ವಿಶ್ವಸಂಸ್ಥೆಯಲಿ
ಚಪ್ಪಾಳೆ ಮೊಳಗ ಕೋಲಾಹಲದ ನಡುವೆ
ಭೋರ್ಗರೆಯುತಿದ್ದ ಭಾರತ ಶ್ರೀಕಂಠ ಭಾಷಣಕ್ಕೆ,
ಕಣ್ಮುಚ್ಚಿ, ಕಿವಿದೆರೆದು,
ಹೆಮ್ಮೆಗಟ್ಲಾಂಟಿಕವೆ ಗೋಷ್ಪದ ಜಲಂ ತಾನಾಯ್ತೆನಲ್ಕೆ:
ಆಲಿಸಿದೆ, ಆಲಿಸಿದೆ; ಆಲಿಸಿದೆ!

ಸ್ವಾಮೀಜಿಯ ಭಾವಚಿತ್ರ ಇದಿರು ಗೋಡೆಯಮೇಲೆ
ತನ್ನಾ ಚಿಕಾಗೋ ಭಾಷಣದ ಭಂಗಿಯಲ್ಲಿ
ಮಂದಹಾಸದಲಿ ನಿಂತಿತ್ತು ತೂಗಿ.
ಗಾಂಧೀಜಿಯ ವರ್ಣಚಿತ್ರ ತನ್ನ ಚೌಕಟ್ಟಿನಲ್ಲಿ
ಉದ್ಯಾನದೊಂದು ವೀಥಿಯಲ್ಲಿ
ಅರ್ಧ ಬತ್ತಲೆಯಲ್ಲಿ,
ಪತ್ರಿಕೆಯ ಹಿಡಿಯುತೊಂದು ಕೈಯಲ್ಲಿ
ಏನೊ ಅವಸರವೆನ್ನುವಂತೆ

ಮಾರುಗಾಲು ಹಾಕಿಯೂ ನಡೆಗೆಟ್ಟು ನಿಂತು,
ಆಲಿಸಿತ್ತು:

“ಸ್ವಾತಂತ್ರ್ಯ, ಐಕ್ಯತೆ, ಸರ್ವೋದಯ, ಸಮನ್ವಯ,
ಸತ್ಯ, ಅಹಿಂಸಾ, ಸ್ನೇಹ, ದಯಾ,
ಚೀನಾ, ಕಾಂಗೋ, ಮಂಗೋಲಿಯಾ,
ಶಾಂತಿಯೊಂದರೊಳೆ ಇಕ್ಕೆಲಗಳಿಗೂ ಜಯ. ….”
ಇತ್ಯಾದಿ ಮೊಳಗಿತ್ತು. ….

ಇಲ್ಲಿಯೋ? ನಾಚಿಗೆಗೇಡು!
ದಸರಾ ದರ್ಬಾರು!
ಜಂಬೂ ಸವಾರಿ!
ಜರಿಯ ಪೇಟ, ಕರಿಯ ಕೋಟು!
ಬಿಳಿ ಷರಾಯಿ, ಉತ್ತರೀಯ!
ಬಗ್ಗ ಸೊಂಟ, ಡೊಗ್ಗು ಸಲಾಮು!
ಗುಲಾಮಿಗೂ ಚಿನ್ನದ ಮುಲಾಮು!
ಹಳೆಯ ಪಾಳೆಯಗಾರಿಕೆಗೆ ಹೊಸ ಪ್ರಹಸನ!
ಭಾರತದ ಪವಿತ್ರ ರಾಜ್ಯಂಗಕೂ ಅವಮಾನ!. ….

ಆಲಿಸಿದೆ, ಆಲಿಸಿದೆ, ಆಲಿಸಿದೆ. …..
ಧೀರ್ಘ ಕರತಾಡನದಿ ಭಾಷಣವು ಕೊನೆಯಾಯ್ತು …..
ಸುಯ್ದು ನಿಂತೆ …..
ಏನೊ ನಿರಾಶೆಯ ಚಿಂತೆ …..
ನಮ್ಮ ದೇಶಕೆ ಏನು ಬಂದರೇನಂತೆ?
ಕೊನೆಗೆ
ಕಮ್ಯೂನಿಸಂ ಏ ಬಂದರೂ:
ಹಾಕುವೆವು ಅದಕ್ಕೂ ಮೂರು ನಾಮ!
ಅದರ ಹೆಗಲಿಗೂ ಬೀಳುವುದು ಜನಿವಾರ!

ಅದಕ್ಕೂ ಕಟ್ಟುವೆವು ಲಿಂಗ!
ಕ್ರಾಸು ತಗುಲಿಸಿದರೂ ಆಶ್ಚರ್ಯವಿಲ್ಲ!
ಇಲ್ಲಿ ಕಮ್ಯೂನಿಸಂ ಊ ಕಿರಸ್ತಾನ!
ಕೊನೆಗೆ,
ಹಿಂದೂಸ್ಥಾನದಲ್ಲಿಯೂ ಅದು ಮುಸಲ್ಮಾನ!

ನಮ್ಮ ರಾಜ್ಯಾಂಗದಲ್ಲಿ ಮಾತ್ರ
ನಾವು ಧರಿಸಿಹುದು ಸೆಕ್ಯೂಲರ್ ಯಜ್ಞಸೂತ್ರ!

೦೩ – ೧೦ – ೧೯೬೦

---

* ೦೩-೧೦-೧೯೬೦ರಲ್ಲಿ ನೆಹರು ಅವರು ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡಿದರು. ಭಾರತೀಯ ವೇಳೆ ರಾತ್ರಿ ೯-೩೦ಕ್ಕೆ ಅದನ್ನು ಪ್ರಸಾರ ಮಾಡಲಾಯಿತು

ಅನಧಿಕೃತ ನಾಮಕರಣೋತ್ಸವ

೧
ಎಲ್ಲ ಮುಗಿದ ಮೇಲೆ, ಮುಂದೆ,
ಯಾರಾದರು ಏನಾದರು ಹೆಸರಿಡಲಿ.
ಹೆಸರನಿಡುವೆ ನಿನಗೆ ಇಂದೆ,
ಓ ಶ್ರಮಜೀವರ ಶತಶತಶತ ಹಸ್ತಕೃತ,
ನಾನು, ಮಲೆಯಕವಿ, ಅನಧಿಕೃತ:
ಕರೆಯಲೆಲ್ಲ ಇಂದಿನಿಂದೆ;
ನಿನ್ನ ಹೆಸರು ಇನ್ನು ಮುಂದೆ:
"ನೃಪತುಂಗ ಸರೋವರ!"

೨
ನಾಮಕರಣ ಸಮಾರಂಭಕನ್ಯಾರಾರು ಇಲ್ಲ;
ಮೇಲೆ ಬಾನು, ಕೆಳಗೆ ಕಾನು,
ಅಲ್ಲಿ ರವಿ, ಇಲ್ಲಿ ಕವಿ,
ಮತ್ತೆ ನಾವೆ ಎಲ್ಲ.
ಮನೆಯ ಮಕ್ಕಳಿಹರು ಕೆಲರು;
ನನೆಯ ತಳಿರ ತೂಗುವೆಲರು;
ಮರಗಳಲ್ಲಿ ಕೆಲವು ಹಕ್ಕಿ
ಏಕೊ ಏನೊ? ಹಾಡುತಿಹವು ಹರುಷವುಕ್ಕಿ!
ಮತ್ತೆ ಇವರೆ ಮಹಾಸಭೆ;

ಸಾಕು,
ಸಮಾರಂಭಕಿಷ್ಟೆ ಗಲಭೆ!
ಅನಲಾ, ಶಿವಾಣಿ, ಸರಮಾ, ಶುಭಾಂಗಿ,
ವಿದ್ಯಾಲಕ್ಷ್ಮಿ, ವಾಗೀಶ್ವರೀ,
ಅಮರೇಂದ್ರ ಕಿರೀಟಿ,
ವ್ಯೋಮಕೇಶ ಹಿಮಾಂಶು! –
ಹೆಸರು ಕೇಳಿದರೆ ಸಾಕು
ಧನ್ಯರಾಗಬೇಕು! –
ಚಿಕ್ಕ ಮಕ್ಕಳೆಂಬೆಯೇನು? –
ಇವರಿಗಿಂತ ದೊಡ್ಡವರನು
ತರುವುದೆಲ್ಲಿಂದಾನು?
ಹೇಳು, ತರಬಲ್ಲೆಯ ನೀನು?

೩
ಉದ್ಘಾಟಿಸೆ ರಾಜ್ಯಪಾಲರೇನು ಇರಲೇಬೇಕೆ?
ಅವರ ಮೀರದೇನು ಈ ಮಕ್ಕಳೊಂದು ಕೇಕೆ!
ಮುಖ್ಯಮಂತ್ರಿ ಅಧ್ಯಕ್ಷತೆಗೇನು ಎರಡು ಕೋಡೆ?
ಸಾಕು ಸುತ್ತ ಕೋಂಟೆಕಟ್ಟಿ ನಿಂತು ಮಲೆವ ಈ ಕಾಡೆ!
ಹಾರ, ವಾದ್ಯ, ಧೂಪ, ಗಂಧ, ಭಿನ್ನವತ್ತಳೆ,
ಒಂದು ಇಲ್ಲ ಇಲ್ಲಿ; ಎಲ್ಲ ದಿವ್ಯ ಬತ್ತಲೆ!
ಯಾರಿಗಿಲ್ಲಿ ಸೊಂಟಬಗ್ಗಿ
ನಮಸ್ಕರಿಪ ತಂಟೆಯಿಲ್ಲ;
ಯಾರಿಗಿಲ್ಲಿ ತಗ್ಗಿ, ತಿಕ್ಕಿ,
ಬಾಲಬೀಸಿ ಕಾಲುನೆಕ್ಕಿ
ಮೇಲೇರುವ ಗೋಜು ಇಲ್ಲ.
ಕೇಂದ್ರದೊಂದು ಕಾಟವಿಲ್ಲ;
ರಾಜ್ಯದೊಂದು ತೋಟಿಯಿಲ್ಲ;
ಈ ಎತ್ತರದಲಿ ಯಾರ ಹಮ್ಮೂ
ನಡೆವುದಿಲ್ಲ;

ಈ ಬಿತ್ತರದಲಿ ಯಾರ ಬಿಮ್ಮೂ
ತಡೆವುದಿಲ್ಲ.

೪
ಮೆರೆಯಲಿ ಈ ಸ್ತಂಭದಲ್ಲಿ
ನೃಪತುಂಗನ ಸುಂದರೋಕ್ತಿ;
ಕರ್ಣಾಟಕದಾದಿಕವಿಯ
ಪಂಪನೊಂದು ಕವನಪಂಕ್ತಿ.
ಜಯವಾಗಲಿ ನಿನಗೆ, ಓ ನೃಪತುಂಗ ಸರೋವರ!
ತೀರ್ಥನೀಲ ಈ ವಿಶಾಲವಕ್ಷವೀಂಟಿ
ಸೊಗಯಿಸುಗೆ ಚರಾಚರ!
ನಿನ್ನ ಸಲಿಲಬಾಹುವಪ್ಪಿ
ಸಹ್ಯಾದ್ರಿಗೆ ಸಂಜನಿಸಿಹ
ಅರಣ್ಯಶಿಖರವೆಸೆವ ಆ ದ್ವೀಪದಲ್ಲಿ
ದಿವೌಕಸರು ಇಳಿದುಬಂದು
ಅಪ್ಸರೆಯರ ಜೊತೆಗೆ ಮಿಂದು
ಕಾಣಲಿ ನಂದನವನು ಈ ಮರ್ತ್ಯದಲ್ಲಿ!

ಉಷೆಯ ಉಟ್ಟ ಸೀರೆಗೆಂಪು
ನಿನ್ನ ಹಸಿರು ಮೆಯ್ಯಲಿ
ಪ್ರತಿಫಲಿಸಲು ಓಕುಳಿಯೊಳು,
ಏಳುಕುದುರೆ ಕೈಯಲಿ
ಅರಣನೇರಿ ಬರುವ ತೇರು
ಮುಳುಗಿ
ಕರಗಿತೊ ಎನೆ, ನಿನ್ನ ನೀರು
ಹೊಳೆಯೆ ಅಗ್ನಿಯುಜ್ವಲ,
ಕಾಣ್ಬ ಕವಿ ಧನ್ಯನಲಾ!

ಜನಜನದಲಿ ಮನಮನದಲಿ ಹೊಮ್ಮಿಹರಿಯೆ ಹೃದಯತೋಷ
ಎಂದೆಂದೊ ಬತ್ತದಿರ್ಕೆ ಸಹ್ಯಾದ್ರಿಯ ಸ್ತನ್ಯಕೋಶ;
ಮುಂದೊಂದೂ ತಣ್ಣಗಕ್ಕೆ ಬರಗಾಲದ ಅಗ್ನಿರೋಷ;

ಹೆಡೆಯಾಡಲಿ ಶಾಂತಿ, ಶಕ್ತಿ, ಮೈತ್ರಿ, ಧೈರ್ಯದಾದಿಶೇಷ!
ಜಯವಾಗಲಿ ನಿನಗೆ, ಓ ನೃಪತುಂಗ ಸರೊವರ!
ತೀರ್ಥನೀಲ ಈ ವಿಶಾಲ ವಕ್ಷವೀಂಟಿ
ಸೊಗಯಿಸುಗೆ ಚರಾಚರ!

೫
ಅಜ್ಜ, ಅಜ್ಜಿ, ಅಪ್ಪ, ಅಮ್ಮ, ದನ, ಕರು, ದೇವರು,
ಗತಕಾಲದ ಶತಮಾನದ ನೆನಪಿನೊಂದು ಸುರತರು,
ತವರು, ಗದ್ದೆ, ತೊಟ, ಮನೆ …..
ತಮ್ಮದೆಂಬುದೆಲ್ಲವೂ
ಮುಳುಗಿದವರ ಕಣ್ಣೀರನೆ
ಒಳಕೊಂಡಿಹೆ ನೀನ್ ಅದನೂ ನಾ ಬಲ್ಲೆ!

ಕಾಳಿಯವೋಲ್ ನುಂಗಿದುದನು ನೂರುಮಡಿಗೆ ಮೀರಿ
ಲಕ್ಷ್ಮಿಯವೋಲ್ ನೀಡುವೆಯೆಂಬಾಶಯವನು ಸಾರಿ
ವಂದಿಸುವೆನು ಮುಂದಪ್ಪುದಕಿಂದಿಲ್ಲೆ! –
ಜಯವಾಗಲಿ ನಿನಗೆ, ಓ ನೃಪತುಂಗ ಸರೋವರ!
ತಿರ್ಥನೀಲ ಈ ವಿಶಾಲ ವಕ್ಷವೀಂಟಿ
ಸೊಗಯಿಸುಗೆ ಚರಾಚರ!*

೧೩ – ೧೦ – ೧೯೬೧

* ಮಿತ್ರರು ಮತ್ತು ಅವರ ಮನೆಯ ಮಕ್ಕಳೊಡನೆ ಲಕ್ಕವಳ್ಳಿಯ ಅಣೆಕಟ್ಟಿಗೆ ಹೋಗಿದ್ದಾಗ ಅಲ್ಲಿರುವ ಉತ್ತುಂಗ ವೇದಿಕೆಯ ಸ್ತಂಬದ ಸಾನಿಧ್ಯದಲ್ಲಿ ನಿಂತು ಜಲಾಶಯ ಮತ್ತು ಅದಕೆ ಅಂಚುಕಟ್ಟಿದಂತಿರುವ ಅರಣ್ಯಾದ್ರಿಯನ್ನು ವೀಕ್ಷಿಸಿ.

ತೆರಿಗೆನಾಯಿ

ತೆಗೆದಿ ಬಾಯಿ ತೆರಿಗೆನಾಯಿ

ಅಟ್ಟುತಿಹುದು: ಬಂದು ಕಾಯಿ,
ಹೇ ದೇವಿ, ಕಬ್ಬತಾಯಿ!

ಕೃತಿ ಸಮಾಧಿ ಭಂಗಕಾರಿ,
ಏಕಾಗ್ರತೆಯ ತಿಂಬ ಮಾರಿ,
ಲೆಕ್ಕಪಲ್ಲುಗಳನೆ ತೋರಿ
ಮಿಕ್ಕುದೆಲ್ಲವನೂ ತೂರಿ
ಅಟ್ಟುತಿಹುದು ತೆರಿಗೆನಾಯಿ:
ಬಂದು ಕಾಯಿ, ಕಬ್ಬತಾಯಿ!

ಬೇಹಾರಿಯೊ ರೂವಾರಿಯೊ
ಶಿಲ್ಪಿವರನೊ ಕವಿಯೊ ಕಲಿಯೊ
ಅದಕೆ ಒಂದೂ ಗಣನೆಯಿಲ್ಲ;
ಭೇದಗೀದವೇನೂ ಇಲ್ಲ!
ಲಂಚದಾಶೆ ಅದಕೆ ಬಾಲ;
ಹೊಟ್ಟೆಕಿಚ್ಚೆ ಹಿಸುಣಗಿವಿ;
ಕಾನುನೆಯೆ ಜೋಲ್ವ ಜಿಹ್ವೆ;
ಅನುಮಾನವೆ ಕಾಲ ಉಗುರು;
ಅಪಮನವೆ ಸೋರ್ವ ಜೊಲ್ಲು!

ಹರಿಶ್ಚಂದ್ರ ಚಂದ್ರಮತಿಯ
ವಿಪಿನಗತಿಯ ಹಿಂದೆ
ಕುಶಿಕತನಯ ಶಿಷ್ಯನಂತೆ
ತೆರಿಗೆಶನಿಯೆ ಬಂದೆ:
ಕವನ ರಚಿಸುವೆನ್ನ ಮನಕೆ
ಪೀಡೆಯಾಗಿ ನಿಂದೆ!
ಕವಿಯ ಹರಿಶ್ಚಂದ್ರ ಮತಿಗೆ
ಏಕೆ ಶ್ರೀ ಸರಸ್ವತಿಗೆ
ಈ ನಕ್ಷತ್ರಕನ ಕಾಟ,
ಎದೆಯ ಕೊರೆವ ಕೀಟ?

ದುಡಿಮೆಯನ್ನೆ ಕಡಮೆಗೊಳಿಸಿ:
ತೆರಿಗೆ ಗೋಳಿದೇಕೆ?
ಕೊಡುವ ಮೊದಲೆ ಕಡಿದುಕೊಳ್ಳಿ:

ಕೊಟ್ಟು ಕೊರೆವುದೇಕೆ?
ತೆರಿಗೆಯಿರುವ ನಾಕವೂ
ನರಕಲೋಕವೆ!
ತೆರಿಗೆಯಿರದ ನರಕವೂ
ನಿಜದಿ ನಾಕವೆ!

೨೫ – ೧೦ – ೧೯೬೧

ಮೌಢ್ಯಮೇಧ

ಎತ್ತಿ ಋತ್ವಿಕ್ಕರನು ಎಸೆ ಹೋಮಕುಂಡಕ್ಕೆ
ಅಷ್ಟಗ್ರಹಕೂಟ ದೋಷ ಪರಿಹಾರಕ್ಕೆ!
ಓ ಬೆಪ್ಪ,
ತುಪ್ಪವನು ಬೆಂಕಿಗೆಸೆಯಲು ಶಮನವಾಗುವೊಡೆ ಗ್ರಹದ ಪೀಡೆ
ಪುಷ್ಟನಪ್ಪಾ ಪುರೋಹಿತನನಾಹುತಿ ಮಾಡೆ
ಮತ್ತೆಷ್ಟು ಪರಿಹಾರ ದೊರೆಯದೇನ್ ಕೇಡೆ?
ಅಂದು ಫ್ರಾನ್ಸಿನ ಕ್ರಾಂತಿಕಾರ ದಿದೋರೆ
ದೊರೆ ಪುರೋಹಿತರ ಕುರಿತಾಡಿದಾ ಸೂಕ್ತಿ
ದಿಟವಾಗದಿದ್ದರೀ ಪೊಡವಿಗಿಹುದೇ ಮುಕ್ತಿ?
– “ಕೊನೆಯ ಪುರೋಹಿತನ ಕರುಳು
ಕೊನೆಯ ದೊರೆಯ ಕೊರಳಿಗುರುಳು
ಬಿಗಿಯದಿದ್ದರೆಲ್ಲಿ ತಿರುಳು
ಪೃಥ್ವೀ ಸ್ವಾತಂತ್ರ್ಯಕೆ?” –
ಮತ್ತೆ ಮತ್ತೆ ಹಿಡಿಸುತಿಹರು ಜನಕೆ ಮರುಳು:
ಅಷ್ಟಗ್ರಹ ದುಷ್ಟಗ್ರಹ ಭಯವತೋರಿ
ಅರಳ ಹೆಸರಿನಲ್ಲಿ ಮರಳ ಬೀರಿ
ಮಂಕು ಜನದ ಮನಕೆ ಮಾಡುತಿಹರು ಅರಳುಮರಳು!

೦೯ – ೦೧ – ೧೯೬೨

ಪ್ರಾರ್ಥಿಸಿ, ಓ ಮಕ್ಕಳಿರಾ!

ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
ಪೂತನಿಯ ಅಸುವೀಂಟಿ ಕೊಂದ ಗೋವಿಂದ!

೧
ಅಂದು ಹಾಲೆಂದು ವಿಷವೂಡಲೈತಂದ
ಮಕ್ಕಳಾ ಮಾರಿಯನು ರಕ್ಕಸಿಯ ಕೊಂದ
ಹೇ ಕೃಷ್ಣ, ಹೇ ಬಾಲಗೋಪಾಲ, ಕಂದಾ,
ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
ಪೂತನೀಯ ಅಸುವೀಂಟಿ ಕೊಂದ ಗೊವಿಂದ!

೨
ತಾಯ ಮೊಲೆಯಂದದಲಿ ತೋರ್ಪವಳ ಕಬ್ಬಿಣದ
ಹೇರೆದೆಯ ಕೆಚ್ಚಲನು ಬಾಯ್ಗಿಟ್ಟು, ತುಟಿಹರಿದು,
ರಕ್ತಸೋರುವ ನಮ್ಮನೊಲಿದು ಕಾಪಾಡಯ್ಯ;
ಭಾರತಿಯ ಮಕ್ಕಳಾಯುವ ರಕ್ಷಿಸಯ್ಯಾ!
ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
ಪೂತನೀಯ ಅಸುವೀಂಟಿ ಕೊಂದ ಗೊವಿಂದ!

೩
ಹೊಟ್ಟೆಗೂ ಹಾಲಿಲ್ಲ; ಬಾಯಿಗೂ ಬಿಡುವಿಲ್ಲ;
ಕೆಟ್ಟವಯ್ಯಾ ಈ ಬೆಟ್ಟಬಂಡೆಯ ನಂಬಿ;
ಕೊಟ್ಟಕೊನೆಗೂ ಬರಿಯ ದಣಿವು ಬಾಯಾರಿಕೆ!
ನಮ್ಮ ನುಡಿ – ಗೋಮಾತೆಯಾ ಮೆತ್ತಗೆಚ್ಚಲಿಗೆ
ಬಾಯಿಟ್ಟರಾಯ್ತು ಹೊಡೆತುಂಬೆ ನೊರೆಹಾಲಿರಲು

ಏಕಯ್ಯ ಈ ಬರುಡು ಪೂತನಿಯ ಹಾಲ್ದೋರಿಕೆ?
ಹೇ ಕೃಷ್ಣ, ಹೇ ಬಾಲಗೊಪಾಲ, ಕಂದಾ,
ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
ಪೂತನೀಯ ಅಸುವೀಂಟಿ ಕೊಂದ ಗೊವಿಂದ!*

೨೧ – ೦೧ – ೧೯೬೨

---

* ಭಾರತದ ವಿವಿಧ ರಾಜ್ಯಗಳ ಮುಖ್ಯಮಂತ್ರಿ ಮಹನೀಯರುಗಳು ನಿರ್ಧರಿಸಿದಂತೆ ಇಂಗ್ಲೀಷನ್ನು ಮೂರನೇ ತರಗತಿಯಿಂದಲೇ ಪ್ರಾರಂಭಿಸುತ್ತಾರೆಂಬ ದೇಶ ವಿನಾಶಕವಾದ ಅಮಂಗಳ ವಾರ್ತೆಯನ್ನು ಕೇಳಿ ಬರೆದದ್ದು.

ಅಷ್ಟಗ್ರಹ ಯೋಗಸಿದ್ಧಿ

ಮಾಡಿರಯ್ ಯಾಗಗಳ! ತಿನ್ನಿರಯ್ ಭಕ್ಷ್ಯಗಳ!

ಭೋಜನವೆ ಯೋಜನೆಯ ಮುಖ್ಯ ಅಂಗ!

ಮಂಕು ಮಂದಿಗೆ ಮೌಢ್ಯಮಧ್ಯವನು ಕುಡಿಸಿರಯ್;
ಸುಳ್ಳು ಭಯವನು ಬಿತ್ತಿ ಚೆನ್ನಾಗಿ ದುಡಿಸಿರಯ್.
ಕತ್ತೆಗಳಿರುವದೇಕೆ? ನಮ್ಮ ಮಡಿ ಹೊರುವುದಕೆ:
ಕತ್ತೆಗಳಿಗುತ್ತಮೆ ಇತ್ತರಾಯ್ತೆಮ್ಮ ಗತಿ!
– "ಬಡವರ ಹಸಿವೆಗೆ ಮೌಢ್ಯವ ಕೊಟ್ಟು
ಸುಖಸಂಪತ್ತನೆ ಕೊಂಡು .....
ಮೃಷ್ಟಾನ್ನವನೇ ಉಂಡು ...." –
ಪಡೆಯಿರಿ ಅಷ್ಟಗ್ರಹ ಯೋಗದ ಸಿದ್ಧಿ,
ನಿಮಗಿದ್ದರೆ ಬುದ್ಧಿ!....

೨೯ – ೦೧ – ೧೯೬೨

ಭಾವೈಕ್ಯತೆ

೧
"ಓ ನನ್ನ ಮುದ್ದು ಕುರಿಮರಿ,
ನಿನ್ನ ಕಂಡರೆ ನನಗೆ ವಾತ್ಸಲ್ಯ ಉಕ್ಕುತಿದೆ;
ನನ್ನ ಅಕ್ಕರೆ ತನ್ನ ಮನದೊಳೆ ನಿನ್ನ ಮೈನೆಕ್ಕುತಿದೆ!
ನೀನು ತಬ್ಬಲಿ ಎಂದು ಕೇಳಿ

ಬೇಯುತಿದೆ ಹೊಟ್ಟೆ, ಮರುಕ ತಾಳಿ.
ಓ ನನ್ನ ಮುದ್ದು ಕುರಿಮರಿ,
ನಿನ್ನದೆಲ್ಲಾ ಸರಿ;
ಆದರೊಂದೇ ನನಗೆ ಹೃದಯದುರಿ:
ನಿನ್ನ ಈ ಪ್ರತ್ಯೇಕತಾ ಪರಿ
ನನಗೆ ತೋರುವುದಿಲ್ಲ ಸರಿ!

೨
“ನೀನು ನಾನು ಒಂದಾದರೆ
ಮುಗಿಯಿತೆಂದೆ ಅರಿ
ನಿನ್ನ ತೊಂದರೆ,
ಮುದ್ದು ನನ್ನ ಓ ಮರಿ!
ಬೇರೆಯಾಗಿ ದೂರ ನಿಂತು
ಏಕೆ ಪಾಡು ಪಡುವೆ ಇಂತು?
ಬಾ, ಬಾ, ಬಳಿಗೆ ಬಾ;
ನನ್ನಳೈಕ್ಯವಾಗು ಬಾ.
ಐಕ್ಯದೊಳೇ ಇಹುದು ಬಾಳು;
ಅನೈಕ್ಯತೆಯೆ ನೋವು, ಗೋಳು.

೩
“ಅಂದು ನನ್ನ ಪೂರ್ವಜ
ನಿನ್ನ ಆ ಪೂರ್ವಜಗೆ
ಹೇಳಿದಂತೆ ಹೇಳೆ ನಾನು
‘ನೀರು ಎಂಜಲಾಯ್ತು’ ಎನ್ನೆ ನಾನು.
‘ನನ್ನನೇಕೆ ಬೈದೆ ನೀನು?’ ಎನ್ನೆ ನಾನು.
‘ನೀನೆ ಅಲ್ಲದಿದ್ದರೇನು?
ನಿನ್ನ ಅಪ್ಪ ಬೈದರೇನು?
ಆ ತಪ್ಪು ಮಗನದಾಗದೇನು?’
ನಿನ್ನ ಅಪ್ಪ ಬೈದ ಎಂದು
ಅನ್ಯಾಯದಿ ನಿನ್ನ ಕೊಂದು
ತಿನ್ನಲೊಲ್ಲೆ ನಾನು ಇಂದು.”

೪

“ನನ್ನ ಹೃದಯದಲ್ಲಿ ನಿನಗೆ
ಬೇಕಾದಷ್ಟು ಜಾಗವಿದೆ;
ನೀನು: ತಿಂದು ತೇಗುವಷ್ಟು
ನನ್ನ ಹೊಟ್ಟೆಯಲ್ಲಿ ನಿನಗೆ
ಬೇಕಾದಷ್ಟು ಭೋಗವಿದೆ.
ನಿನಗೆ ಏಕೆ ಬೇರೆ ಭಾಷೆ?
‘ಮೆಹೆಹೆ! ಮೆಹೆಹೆ! ಮೆಹೆಹೆ! ಮೆಹೆಹೆ!’
ಬರಿಯ ಗುಡ್ಡಗಾಡು ಭಾಷೆ!
ನನ್ನದೊ ಅದು ವಿಶ್ವಭಾಷೆ!
ಪ್ರಪಂಚಕೇ ರಾಷ್ಟ್ರಭಾಷೆ!
ನಾನು ಬೇರೆ ಎಂಬ ಭ್ರಾಂತಿ
ಅದೇ ಮೂಲ ಜಗಕ್ಕಶಾಂತಿ!”

೫

“ಹೊಂಚುತಿಹನು ದುಷ್ಟವ್ಯಾಘ್ರ,
ಅದರ ಬಾಯ್ಗೆ ಬೀಳಬೇಡ;
ನೊಂಕುತಾಚೆಗೆಲ್ಲ ಕೇಡ
ಬಾ ನನ್ನ ಒಳಗೆ ಶೀಘ್ರ!
ನೀನು ನಾನು ಬೇರೆ ಜಾತಿ
ಎಂಬುವವರ ಕುಹಕ ನೀತಿ
ನಂಬಿದರದೆ ನಮಗೆ ಭೀತಿ?
ಒಂದೆ ನೀತಿ, ಒಂದೆ ಜಾತಿ,
ಒಂದೆ ನಾಡು, ಒಂದೆ ಬೀಡು,
ಒಂದೆ ಒಂದೆ ಒಂದೆ ಒಂದೆ
ನಾವೆಲ್ಲರೂ ಒಂದೇ!
ನಿನಗೆ ಸುಖವು ಬೇಕೆ ಹೇಳು;
ನನ್ನ ಮಾತು ಕೇಳು:
ಬಳಿಗೆ ಬಾ, ಒಳಗೆ ಬಾ;
ನನ್ನೊಳಾಗಿ ನನ್ನನಾಳು!

ನೀನೆ ನಾನು, ನಾನೆ ನೀನು,
ಆಗಿ, ಸುಖದಿ ಬಾಳು!”

೧೦ – ೧೦ – ೧೯೬೨

ಎತ್ತು ಆರತಿ, ಓ ಭಾರತಿ!

೧
ಅವನಿಗೆತ್ತು ಆರತಿ,
ಓ ದೇವಿ ಭಾರತಿ:
ನಿನ್ನ ವೀರ ರಣಮತಿ!
ಹೆಸರೊಲ್ಲದ ದಳಪತಿ!
ಎತ್ತಾರತಿ, ಓ ಭಾರತಿ,
ಅವನಿಗಲ್ತೆ ಸ್ವರ್ಗತಿ!

೨
“ಮುಂದೆ ಹೆಣ! ಹಿಂದೆ ಹೆಣ!
ಅತ್ತ ಇತ್ತ ಸುತ್ತ ಮುತ್ತ
ಎತ್ತ ನೋಡಲತ್ತ ಹೆಣ!
ನಡುವೆ ನನ್ನ ಮೆಷೀನ್ ಗನ್ನ
ನಿರಂತರದ ಮಾರಣ!
ಡಮ ಡಮ ಡಮ! ಅಮಮ! ಅಮಮ!
ಅನುರಣಿಸಿತೊ ಹಿಮಾಲಯ!
ಕೆದರಿತೊ ಹಿಮ, ಬೆದರಿತೊ ಹಿಮ,
ನಡುಗಿತ್ತೆನೆ ಭೂಮಿಲಯ!
ಡಮ ಡಮ ಡಮ! ಡಮ ಡಮ ಡಮ!
ಅಟ್ಟಹಾಸಂಗೆಯ್ಯೆ ಯಮ
ಅಮಮ ನನ್ನ ಮೆಷಿನ್ ಗನ್ನ
ಸಿಡಿಗುಂಡಿನ ದಾರುಣ
ಬೆಟ್ಟಿತ್ತಾಯ್ತೆ ಗಿರಿರಣ!

೩

“ಹಿಂಡು ಹಿಂಡು ಹಿಂಡು ಹಿಂಡು
ತೆರೆ ತೆರೆ ತೆರೆ ಮೇಲೆ ಮೇಲೆ
ಹಾಯ್ದು ಬಂತೊ ಚೀಣಿ ದಂಡು
ಕಾಲಾಂತಕ ನಾಯ್ಗಳೋಲೆ!
ಹಿಮಾಚಲದ ಬಂಡೆಗುಂಡು
ಉರುಳಿ ಉರುಳಿ ಹೊರಳಿ ಹೊರಳಿ
ಕೆರಳಿ ಬರುವ ತೆರದಲಿ
ಅಸಂಖ್ಯ ಭರದಲಿ
ಹಿಂಡು ಹಿಂಡು ಹಿಂಡು ಹಿಂಡು
ನುಗ್ಗಿ ಬಂತೊ ಚೀಣಿ ದಂಡು!
ಆದರೇನು? ನನ್ನ ಕೋವಿ,
ರುದ್ರಕಾಳಿ, ಮಹಾದೇವಿ,
ಯಂತ್ರರೂಪಿಯಾಗಿ ಓವಿ
ಓಕರಿಸಿತು ಸಿಡಿಮದ್ದಿನ
ಪ್ರಲಯವರ್ಷವನ್ನೆ ಕಾರಿ,
ಸತ್ಯ ಗೆಲುವುದೆಂದು ಸಾರಿ,
ಗಣಭಾರತ ರಣಭೇರಿ!
ಸದ್ಧರ್ಮದ ಜಯಭೇರಿ!”

೪

“ಬಲಕೆ ಬಿತ್ತು ಒಂದು ಗುಂಡು;
ಕಲ್ಲು ಮಣ್ಣು ಸಿಡಿಯಿತು.
ಎಡಕೆ ಬಿತ್ತಿನ್ನೊಂದು ಗುಂಡು;
ಕುಳಿರ್ಗೈಕಿಲ್ ಒಡೆಯಿತು.
ಗಿರಿಗಹ್ವರ ಗುಹಾಕಂಠ
ಶತ ಶತ ಶತ ದಿಶಾ ಕಂಠ
‘ಹೋ’ ಒಕ್ಕೊರಲೊದರಿತು!
ಹಾ ಮೃತ್ಯುವೆ ಬೆದರಿತು!
ಮೇಲೆ ಹೋಯ್ತು ಒಂದು ಗುಂಡು,

ಇದಿರೆ ಬಿತ್ತಿನ್ನೊಂದು ಗುಂಡು;
ನೆತ್ತಿ ಕೀಸಿತೊಂದು ಗುಂಡು!
ಪಕ್ಕದವನ ಕಾಲೆ ತುಂಡು:
ಚಿಮ್ಮಿ ಬಿದ್ದುದೆನ್ನ ಬಳಿ!
ಆದರವನದೆಂಥ ಕಲಿ?
ಕೂಗಲಿಲ್ಲ, ಚೀರಲಿಲ್ಲ,
ನೋವಿಗಿನಿತು ನರಳಲಿಲ್ಲ,
ಸಾವ ಮುನ್ನ ಮೆಷೀನ್ ಗನ್ನ
ತುಂಬುವುದನು ತೊರೆಯಲಿಲ್ಲ…..
ಓ ದೇವಿ ಭಾರತಿ,
ಅವನಿಗೆತ್ತು ಆರತಿ!"

೫
"ಡಮ ಡಮ ಡಮ! ಡಮ ಡಮ ಡಮ!
ಹಿಮ ಬಂಧುರ ಗಿರಿಕಂದರ
ಅಟ್ಟಹಾಸ ಮೊರೆಯಿತು;
ಕುದಿವ ನನ್ನ ಮೆಷೀನ್‌ಗನ್ನ
ಲೌಹವರ್ಷ ಕರೆಯಿತು.
ಕೆಂಪು ಚೀಣದೊಡಲ ಕೋಡಿ
ಒಡೆದು ಹೆಪ್ಪುಗಟ್ಟಿತು;
ಹಳದಿ ಜನರ ಹೆಣದ ಬಣಬೆ
ಸುತ್ತ ಕೋಂಟೆ ಬಿದ್ದಿತು!
ಬಲಕೆ ಗುಂಡು! ಎಡಕೆ ಗುಂಡು!
ಮೇಲೆ ಗುಂಡು! ಕೆಳಗೆ ಗುಂಡು!
ಕಾಲಿಗೊಂದು! ತೋಳಿಗೊಂದು!….
ಹೊಟ್ಟೆಗೊಂದು!…. ಬಿದ್ದೆನು!
ಸುಡುವ ನನ್ನ ಮೆಷೀನ್‌ಗನ್ನ
ಆತು ಮತ್ತೆ ಎದ್ದೆನು!
ಎಡಕೆ ಬಲಕೆ ಮೇಲೆ ಕೆಳಗೆ
ಗುಂಡು ಗುಂಡು ಗುಂಡು ಗುಂಡು….

ಹಾ….
ತಾಯ ಸೇವೆಗೂನ ಬಂತೆ?
ಎದೆಗೆ ಬಿತ್ತೆ ಒಂದು ಗುಂಡು?
ಎದ್ದೆ! ಏಳದಾದೆ! ಮತ್ತೆ
ತತ್ತರಿಸುತ ಬಿದ್ದೆನು!…..

ಧಾವಿಸಿತ್ತು ಬಳಿಗೆ, ಕಂಡು,
ಚೀಣೀಯರ ಹಂದಿಹಿಂಡು!
ಸುತ್ತಲಿರದೆ ಸಿಡಿಯುತ್ತಿತ್ತು
ವೈರಿದಳದ ಮದ್ದುಗುಂಡು!
ಜೊತೆಯಿದ್ದವರೋಡಿಬಂದು
ಎತ್ತಿ ರಕ್ಷೆಗೊಯ್ಯಲೆಂದು
ತುಡುಕಿ ಹಿಡಿದರೆನ್ನನು!
ರಕ್ತ….ಕೋಡಿ ಹರಿಯುತ್ತಿತ್ತು;
ಒಡಲೊ? ಛಿದ್ರ ಛಿದ್ರವೋಗಿ
ಕುಸಿಯುತ್ತಿತ್ತು….
ಗದರಿದೆ!
‘ವೀರರಿರಾ! ಮಿತ್ರರಿರಾ!
ತಾಯ್ಗೆ ಬೇಕು ನಿಮ್ಮ ಸೇವೆ;
ಎಂತಿದ್ದರು ನಾನು ಸಾವೆ!...
ನನ್ನನುಳಿಸಲೆಳಸಿ ನೀವೆ
ವ್ಯರ್ಥ ಸತ್ತರದೂ ದ್ರೋಹ!
ಸಾಕು ಬಿಡೀ ನಿಮ್ಮ ಮೋಹ!
ಕೊಳೆಯಲಿಲ್ಲೆ ನನ್ನ ದೇಹ!….
ನಿಮಗೆ ಇದೋ ನನ್ನ ಆಜ್ಞೆ:
ಹಿಂದೆ ಸರಿದು ನಡೆಯಿರೊಡನೆ;
ಮೂಲ ದಳವ ಕೂಡಿಕೊಳ್ಳಿ;
ನನ್ನಿಲ್ಲೆ ತ್ಯಜಿಸಿರಿ!
ತಾಯ್ಗೆ ಬೇಕು ನಿಮ್ಮ ಸೇವೆ;
ಬದುಕಿ ರಿಪುವ ವಧಿಸಿರಿ!…’

೬

“ಡಮ ಡಮ ಡಮ! ಡಮ ಡಮ ಡಮ!
ಸಿಡಿಲಕಲ್ಲ ಮಳೆಯವೊಲೆ
ಬಡಿದುದೆನಗೆ ಗುಂಡುಮಳೆ;
ಬಂಡೆ ಬಂಡೆ ಬಂಡೆ ಬಂಡೆ
ಉರುಳಿ ಹಾಯ್ವ ಹಗೆಯ ಕಂಡೆ....
ಯಾರೊ ಕೂಗಿದಂತೆ ಆಯ್ತು
ಮರಣ ಮಬ್ಬು ಕವಿಯುತ್ತಿದ್ದ
ನನ್ನ ಪ್ರಜ್ಞೆಗೆ....
ಸರಿದಿದ್ದರು ನಮ್ಮರೆಲ್ಲ
ನನ್ನ ಆಜ್ಞೆಗೆ.....
ಮತ್ತೆ....
ದೂರ ಯಾರೊ ಕೂಗಿದಂತೆ....
ಸತಿಯ ಚಿಂತೆ, ಸುತರ ಚಿಂತೆ,
ಸುಳಿದು ಹೋಯ್ತು ಊರ ಚಿಂತೆ....
ಜಗಜ್ಜನನಿ, ಭರತಮಾತೆ,
ರಕ್ಷೆಗಿರಲು ಏಕೆ ವ್ಯಥೆ?
ಮರೆವು ಮುಸುಗುತಿತ್ತು ನನ್ನ....
ಯಾರೊ? ಯಾಕೊ? ಮೆಷೀನ್ ಗನ್ನ....
ಬಳಿಯೆ ಯಾರೊ ಕೂಗಿದಂತೆ....
‘ಹಿಂದಿ ಚೀಣಿ ಭಾಯ್ ಭಾಯ್!
ಹಿಂದಿ ಚೀಣಿ ಭಾಯ್ ಭಾಯ್!
ಹಾಯ್! ಹಾಯ್! ಹಾಯ್!”

೧೪ – ೦೧ – ೧೯೬೩

ಸಾಕು ಈ ಬಲಾತ್ಕಾರ

೧
ಇಂಗಿಹೋಗುತಿದೆ ಇಂಗ್ಲೀಷಿನ ಮರುಭೂಮಿಯಲಿ
ನಿನ್ನ ಮಕ್ಕಳ ಶಕ್ತಿ – ಬುದ್ಧಿ – ಪ್ರತಿಭಾ;
ರಾಷ್ಟ್ರನಾಯಕ ಮನದಿ ವಿವೇಕರೂಪದಿ ಮೂಡಿ,
ಓ ರಸಮಯೀ ಸರಸ್ವತಿಯೆ, ಪೊರೆ ಬಾ!

೨
ಕಲ್ಲ ಕುಂಡದಿ ನೆಟ್ಟ ಅಶ್ವತ್ಥಸಸಿಯಂತೆ
ಕಿಮುಳ್ಚಿ ಗುಜ್ಜಾಗುತಿದೆ ಮೊಳೆವ ಚೈತನ್ಯ:
ಭೂಮಿಯಲಿ ಬೇರೂರಿ, ಬಾನೆಡೆಗೆ ತಲೆಯೆತ್ತಿ
ನಿಲುವವರಿಗೇತಕೀ ದಾಸ್ಯದೈನ್ಯ?

೩
ಗಾಂಧಿಯಿಂದಿಂಗ್ಲಿಷರ ದಾಸ್ಯದಿಂ ಪಾರಾದೆ;
ಅವನ ಕೊಂದಿಂಗ್ಲಷಿಗೆ ದಾಸಿಯಾದೆ.
ಓ ತಾಯಿ ಭಾರತಿಯೆ, ಚೀಣಿಯರನೆ ಮೀರಿ
ಹಿಂಡುತಿದೆ ಕಂದರನು ಇಂಗ್ಲಿಷಿನ ಮಾರಿ!

೪
ಬಲಾತ್ಕಾರಕಾಗಿ ಮಾತ್ರವೆ ಹೊರತು ಈ ರೋಷ,
ಭಾಷೆಗಾಗಿಯೆ ನಮ್ಮ ದ್ವೇಷವೇನಿಲ್ಲ;
ತೆಗೆಯಿರಿ ಬಲತ್ಕಾರದಂಶವನು; ಆರಿಸಲಿ
ಸರ್ವರೂ ಇಂಗ್ಲಿಷನೆ, ಚಿಂತೆ ಇನಿತಿಲ್ಲ.

೫
ಭಾವಜಲಮೂಲವನೆ ಹೀರುತಿದೆ ಮರುಭೂಮಿ,
ಹಿಂಡೆ ಜೀವವನು ಇಂಗ್ಲೀಷಿನ ಕಲ್ಗಾಣ;
ಕನ್ನಡದ ಕ್ರಿಸ್ತನದೊ ಇಂಗ್ಲಿಷಿನ ಶಿಲುಬೆಯಲಿ
ಸಿಲುಕಿ ಬಯ್ಬಿಡುತಿಹನು ನೀರಡಸಿ ಪ್ರಾಣ!

೬

ತಮ್ಮವರು ಎಂತಿದ್ದರೂ ನುಸುಳಿ ಬರುವರು ಎಂಬ
ಕೆಚ್ಚಿನಲಿ, ಇಂಗ್ಲಿಸಿನ ಉಕ್ಕಿನ ಬಲೆಯನಿಕ್ಕಿ
ಜಾತಿಯಲಿ ಹಣದಲ್ಲಿ ಅಂತೆ ಅಧಿಕಾರದಲಿ
ಮೇಲೆ ಕುಳಿತವರೆಲ್ಲ ಮರೆಯುತಿರುವರು ಸೊಕ್ಕಿ!

೭

ಹೆಣಭಾರ! ಹೆಣಭಾರ! ಸಾಕೀ ಬಲಾತ್ಕಾರ;
ಸಾಕು ನಿಲ್ಲಿಸಿ, ನಿಮಗೆ ಬೇಕಾದರುದ್ಧಾರ.
ಇಂಗ್ಲಿಷಿನ ಚಪ್ಪಡಿಯಡಿಯ ಹಸುಳೆಚೀತ್ಕಾರ
ಕೇಳಿಸದ ಕಿವುಡರಿರ, ನಿಮಗೇಕೆ ಅಧಿಕಾರ?
ಕೇಳಿಯೂ ಧಿಮ್ಮನಿರೆ, ಕೋಟಿ ಧಿಕ್ಕಾರ!

೮

ಬೇಕಾದರಿಗೆ ಕೊಡಿರೊ, ಬೇಡವೆಂದವರಾರೊ?
ಹೇರಿ ಎಲ್ಲರ ಮೇಲೆ ಕೊಲೆಗೈವರೇಕೊ? –
ಓ ಕಂದ, ಓ ತರುಣ, ಓ ಯುವಕ ಭಾರತೀಯ,
ಮೇಲೆ ಕುಳಿತವರಿಕ್ಕಿದುಕ್ಕುಬಲೆಯನು ಕಿತ್ತು,
ನಿನ್ನ ಸ್ವಾತಂತ್ರ್ಯವನು, ಓ, ನೀನೆ ರಕ್ಷಿಸಿಕೊ!

೯

ಇಂಗ್ಲಿಷಿನ ಜಿಲೊಟಿನ್ನಿನಡಿ ನಿಮ್ಮ ಕೊರಳೊಡ್ಡಿ
ವರಷವರುಷವು ಕೋಟಿ ಕೊಲೆಯಪ್ಪಿರೇಕೆ?
ನಿಮ್ಮ ಶಕ್ತಿಯ ಕುಂದದಲ್ಲ ಕಾರಣ ಕೊಲೆಗೆ:
ಪರಭಾಷೆ ಚಪ್ಪಡಿ! ಪರೀಕ್ಷೆಯ ನೆವಂ ಬೇಕೆ? –
ಏಳು ಎಚ್ಚರಗೊಳ್ಳು ಓ ಭಾರತಿಯ ಕಂದ,
ನಿನ್ನ ಸ್ವಾತಂತ್ರ್ಯವನು, ನೀನೆ ರಕ್ಷಿಸಿಕೊ!

೦೯ – ೦೪ – ೧೯೬೩

ಬಲಾತ್ಕಾರದ ಭಾಷಾತ್ರಿಶೂಲ!

ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ;
ಬಾಲಕರ ರಕ್ಷಿಸೈ, ಹೇ ತ್ರಿಣೇತ್ರ!

ಚೂರು ತಿಂಡಿಗೆ ಸಿಕ್ಕಿಸಿಹರೊ ಈ ಮೂರು ಗಾಳ:
ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣಶೂಲ!

ಮುಂದೆ ದಿಳ್ಳಿಯ ಮಂತ್ರಿಯಾಗುವವ ನೀನೊ?
ಬೇಡವೆಂಬುವರಾರು? ಹಿಂದಿಯನು ಕಲಿಯೊ!
ಬದುಕಿ ಇಲ್ಲಿಯೆ ಬಾಳಿ ಸಾಯುವವ ನಾನೊ!
ನಿನ್ನ ಸೂತ್ರಕೆ ಏಕೆ ನನ್ನ ಬಲಿಯೊ?

ಮುಂದೆ ಇಂಗ್ಲೆಂಡಿನಲಿ ನೀ ರಾಯಭಾರಿ?
ಬೇಡವೆಂಬುವರಾರು?
ಹೊಡೆಬಿರಿಯೆ ಕುಡಿಯೊ ಇಂಗ್ಲಿಷಿನ ಹೆಂಡ ಹೀರಿ!
ನನ್ನ ಮೇಲೇತಕ್ಕೆ ಮಾಡುವೆ ಬಲಾತ್ಕಾರ ಸವಾರಿ?

ನೀನು ಅಂತರರಾಷ್ಟ್ರ ಕೀರ್ತಿಯಂ ಪೊತ್ತು ಗರ್ಜಿಸುವ
ಜಗತ್‌ಪ್ರಸಿದ್ಧ ಹುಲಿಯೆ?
ಇದೆಗೊ ನಿನಗೆನ್ನ ಭೋ ಪರಾಕು!
ನಾನು ಅಜ್ಞಾತ ಅಖ್ಯಾತ ಅನಾಮಕ ಅಲ್ಪ ಇಲಿಯೆ?
ಇರಲಿ:
ಕನ್ನಡದ ಬೆನಕದೇರನ್ನೆಳೆವ ಈ ಧನ್ಯತೆಯೆ ಸಾಕು!

೨೦ – ೦೬ – ೧೯೬೩

ದಿವಂಗತ ಕವಿಗೆ ಜಯಶ್ರೀ ಸ್ಮಾರಕ*

"ಅವರೇನು ಬರೆದಿಹರು ಅಂತಹ ಮಹತ್‌ಕಾವ್ಯ?"
"ಅವರು ಬರೆದುದು ಮಹತ್‌ಕವಿತೆ ಇರದಿರಬಹುದು;
ಅವರು ಬದುಕಿದುದೆಲ್ಲ ಮಹತ್‌ಕವನಗಳೆ ಅಹುದು:
ಅವರೆ ತಾವೊಂದು ಗೊಮ್ಮಟಸಮ ಮಹಾಕಾವ್ಯ!"

'ಸಂತನಾಗಲು ಬಲ್ಲ ಆವನೂ ಸುಧೀರಮತಿ
ಕವಿಯಾಗಲೊಲ್ಲ!' – ಪಡಿವಣದ ಈ ಕವಿ ಉಕ್ತಿ
ಪಡೆದಿಹುದು ಉಪನಿಷತ್ತಿನ ಮಂತ್ರ-ಋತಶಕ್ತಿ:
ಬದುಕಿಗಿಲ್ಲದ ಬೆಲೆಯ ಬೇಡೆ ಸಾಹಿತ್ಯಕೃತಿ?

ಬದುಕಿನಿಂದಲೆ, ಬದುಕಿಗಾಗಿಯೆ ಕಣಾ ಕಲೆಯ ಬೆಲೆ:
ಕವಿಯ ಬಾಳ್ವೆಯೆ ದಿಟದ ಕಾವ್ಯಬೆಲೆ, ರಸದ ನೆಲೆ!
ಕವಿಯ ಬದುಕಿಂದೈಸೆ ಅವನ ಕೃತಿಯಕ್ಕು – 'ಕಲೆ'?

ಕಲೆಯ ಬಾಳ್ವೆಗೆ ಮಿಗಿಲ್ ಬಾಳ್ವೆಯ ಕಲೋಲ್ಲಾಸ:
ಕಲೆ ಸಂಸ್ಕೃತಿವಿಲಾಸ; ಬಾಳ್ ಸೃಷ್ಟಿಗೆ ವಿಕಾಸ!

ನೂರು ಕಾವ್ಯಕೆ ಸಾರವೊಂದು ಸಾಕ್ಷಾತ್ಕಾರ:
ಕವಿಯ ದರ್ಶನ ಅಗ್ನಿದರ್ಪಣ ತಪಃಸಂಸಾರ!

ನಿನ್ನ ಮಂಜೇಶ್ವರದ ಬೀಡು, ಕಾಸರಗೋಡು,
ಮುನ್ನಿನಂತೆಯೆ ಮತ್ತೆ ತಾನಾಗೆ ಕನ್ನಡ ನಾಡು,
ತನ್ನ ಸತ್ವಕೆ ಸಾಕ್ಷಿ ತನದುವೆ ಕನ್ನಡ ಜನತೆ
ಕವಿಗೆ ಕಡೆಯುವ ಜಯಶ್ರೀಸ್ಮಾರಕಂ ತಾನಲ್ತೆ!

೧೪ – ೦೯ – ೧೯೬೩

ದಾಸವರೇಣ್ಯರಿಗೆ

೧

ಅದೊ ಆಲಿಸಿ: ಅನುರಣಿಸುತ್ತಿದೆ
ಸಮರ ತಾಂಡವ ದಮರು ಡಿಂಡಿಮ
ಕುಬೇರ ದಿಗುತಟದಿ!….
ಸ್ವಲ್ಪ ನಿಲ್ಲಿಸಿ ನಿಮ್ಮ ನೃತ್ಯವ,
ದಾಸವರ್ಯರೆ:...
ಏನೊ ಕೇಳಿಸುತಿಹುದು ಆಲಿಸಿ:….
ಗೆಜ್ಜೆ ಕಟ್ಟಿದ ಕಾಲು
ಹೆಜ್ಜೆಯಟ್ಟರೂ ಸದ್ದೆ!
ಇನ್ನು ಕುಣಿದರೆ, ಕೇಳಬೇಕೆ?…. ನಿಗೆದುಬಿದ್ದೆ!….

೨

ಏನದಾ ಹಾಳು ಹಂಪೆಯಲಿ ಕೂಗುತಿವೆ
ಶ್ಮಶಾನ ಕುಕ್ಕುಟಪುಂಜ?
ಗದ್ದುಗೆಯ ಮೇಲಷ್ಟು ಹುಂಜ! –
ಐನುರು ವರ್ಷದಾ ಸಮ್ರಾಜ್ಯವನು ಈ ಗತಿಗೆ ತಂದ
ಹೆಣ್ಣುಭಕ್ತಿಯ ಕುಣಿತ ಸಾಕೆಮಗೆ; ಇಂದು
ಬೇಕಾಗಿಹುದು ಪೌರುಷದ ಶಕ್ತಿ:
"ಪುರಷಸಿಂಹರನ್ನಾಗಿ ಮಾಡು ನಮ್ಮ!"
ಎಂದು ಗರ್ಜಿಸಿದವನ ಶತಮಾನ ಉತ್ಸವವ
ಆಚರಿಸುತಿಹ ನಮಗೆ ಬೇಕಾಗಿಹುದು ಇಂದು
ಗಂಡುಭಕ್ತಿ, ವೀರಭಕ್ತಿ, ಶಕ್ತಿ!

೩

ಆರೊ ನಾಲ್ವರಿಗೆ ಹಿಡಿದ ಹೃದಯದೌರ್ಬಲ್ಯ ವ್ಯಾಧಿಗೆ
ಆಗಿರಬಹುದು ಅಂದು ಆ ಸ್ತ್ರೈಣಭಕ್ತಿ ಸಿದ್ಧೌಷಧಿ.
ಅದನು ಈಗಲೂ ಎಲ್ಲರಿಗೂ ನೀಡಿದರೆ
ವಿಜಯನಗರಕೆ ಆದ ಗತಿಯೆ ಕಾದಿಹುದು ನಮ್ಮನಾಡಿಗಿಂದು.

ಚೀಣಿಯರನಟ್ಟಲ್ಕೆ ಪಾಣಿಪಂಚೆಯನುಟ್ಟು
ಹೋಗಲಾದೀತೆ ಹಿಮಗಿರಿಯ ಕದನಕ್ಕೆ?
ಚಳಿವೆಟ್ಟಿನಾ ಯುದ್ಧಕ್ಕೆ ಬೇಕು
ಬೇರೆ ಪೋಷಾಕು:
ದಾಸ ಸೋಬಾನೆಯಲ್ಲ, ಬೇಕು
ವೈರಿ ಹೃದಯವ ನಡುಗಿಸುವ ಸಾಕು:
"ಜಯ ಕಾಳಿ! ಜಯ ದುರ್ಗೆ!
ಜಯ ಪಾರ್ಥಸಾರಥಿ!
ಜಯ ರಾವಣಾರಿ!...."
ಟಿಂಡಿಣಿ ಟಿಂಟಿಣಿ ತಾಳ ಕಿಂಕಿಣಿಯಲ್ಲ,
ಬೇಕು ತಂಬಟೆ, ಡಮರು, ಕಹಳೆ, ಪಾಂಚಜನ್ಯ!
ಅಲ್ಲ ದಾಸೊಹಂ,
ಬೇಕು ಈಶೋಹಂ:
ಉಪನಿಷತ್ತಿನ ಡಿಂಡಿಮ!
ಜೊತೆಗೆ ರುದ್ರನ ತಾಂಡವ!

೧೭ – ೦೧ – ೧೯೬೪

ಮೇ ಮೂರು

ತೊಲಗಿತೆ ತಲೆಭಾರ?
ಇನ್ನಾದರು ನೆಟ್ಟಗೆ ನಿಲ್ಲೊ,
ಓ ಮೈಸೂರ!
ದಿಟದಿಂ ನೀನಾಗೈ ಮಹೀಶೂರ!

ನಿನಗಿರುವುದು ಗೂನಲ್ಲೊ:
ತಲೆಬಾಗಿ, ಮೈಬಾಗಿ, ಸೊಂಟಬಾಗಿ,
ಬಗ್ಗಿ, ಬಗ್ಗಿ, ತಗ್ಗಿ, ಕುಗ್ಗಿ,
ಕುಗ್ಗಿಯೆ ಗಂಟಾಗಿದೆ ಬೆನ್: ಅಷ್ಟೆಕಣೊ:
ಅದು ಗೂನಲ್ಲೊ!

ತೊಲಗಿತೊ ತಲೆಭಾರ!
ಇನ್ನಾದರು ನೆಟ್ಟಗೆ ನಿಲ್ಲೊ,
ಉಸಿರಳಕೊಳ್ಳೊ,
ಓ ಮೈಸೂರ!

೦೩ – ೦೫ – ೧೯೭೪

ರಾಜ್ಯಪಾಲರಿಗೆ ಅಭಿನಂದನೆ*

ನನ್ನ ಹೊಟ್ಟೆಗೆ ಹಂಡೆ ಹಾಲು ಹೊಯ್ದಂತಾಯ್ತು

ಕನ್ನಡದಿ ಸ್ವಾತಂತ್ರ್ಯಸಂದೇಶವನು ನೀವು
ಕೊಟ್ಟಿರೆಂಬುದನೊದಿ ಪತ್ರಿಕೆಯೊಳಿಂದು. ನಾವು
ಕನ್ನಡಿಗರಭಿಮಾನ ಶೂನ್ಯರೆಂಬುದು ಗೊತ್ತು:
ನಮ್ಮ ಹೆಮ್ಮೆಯ ಬರ್ಹಿಚೂಡವೊ, ಹೆರರ ಹೊರೆಹೊತ್ತು,
ನಮ್ಮ ದೌರ್ಬಲ್ಯವನೆ ಔದಾರ್ಯವೆಂಬವರ
ಹೊಗಳಿಕೆಗೆ ಬಾಯ್ಬಿಟ್ಟು, ನಮ್ಮತನವನೆ ತೆತ್ತು,
ಕೆಂಬೂತ ಕುಣಿತ ಕುಣಿಯುವುದೆ!.... ಕನ್ನಡಿಗರಿರ,
ಕಲಿಯಿರೈ ತೆಲುಗು ತಮ್ಮಂದಿರಂ, ತಮಿಳ ಅಣ್ಣರಿಂ,
ಗೆಳೆಯರು ಮರಾಠರಿಂ, ಮಲೆಯಾಳಿ ಚೆಣ್ಣರಿಂ:
ನುಡಿ ನಿಮ್ಮ ಮೆಯ್ಯ ರಕ್ಷಿಸುವ ಖರ್ಪರ ಚರ್ಮ:
ಭಾವಿಸಿರೊ, ಪರಿಭಾವಿಸಿರೊ, ಕವಿಯ ಮಾತಿನ ಮರ್ಮ!
ಚರ್ಮವನೆ ಸುಲಿದ ಮೇಲಾವುದಿರುವುದು ರಕ್ಷೆ?
ನರಿ ನಾಯಿ ಕಾಗೆಗಳಿಗುಣಿಸಾಗುವುದೆ ಶಿಕ್ಷೆ!

೧೫ – ೦೮ – ೧೯೭೪

* ರಾಜ್ಯಪಾಲ ನಿಟ್ಟೂರು ಶ್ರೀನಿವಾಸರಾಯರು ಸ್ವಾತಂತ್ರ್ಯೋತ್ಸವದ ದಿನದಂದು ಸೈನಿಕ ಗೌರವಾನಂತರ, ಮೊಟ್ಟಮೊದಲನೆಯ ಸಾರಿ, ಕನ್ನಡದಲ್ಲಿ ಸಂದೇಶವಿತ್ತ ಸುದ್ದಿಯನ್ನೋದಿ.

ಸಾಕಾಯಿತೆ ರಕ್ತಸ್ನಾನ?

ಸಾಕಾಯಿತೆ ರಕ್ತಸ್ನಾನ?
ಇನ್ನಾದರು ಬುದ್ಧಿಯ ಕಲಿ, ಓ ಪಾಕಿಸ್ತಾನ!
ಹಿತವನೆ ನಿನಗೆಂದಾದರು ಆ ಪ್ರಾಚೀನ,
ರಾಕ್ಷಸ ತೃಷ್ಣೆಯ ಖಲ ಚೀನ?
ಕೊನೆಗೂ ನಿನಗೆ ಸಹೋದರ – ಹಿಂದೂಸ್ತಾನ!

ದ್ವೇಷಕೆ ಹುಟ್ಟಿದೆ; ದ್ವೇಷದಿ ಬೆಳದೆ;
ದ್ವೇಷವ ಸಾಧಿಸೆ ವೈರವ ತಳೆದೆ.
ಸರ್ವಾಧಿಕಾರಕೆ ಬಲಿಯಾದೆ;
ಸರ್ವ ಧಿಕ್ಕಾರದಿ ಕಲಿಯಾದೆ;
ಗರ್ವಕೆ ತುತ್ತಾದೆ;
ಲೋಕಕೆ ಕುತ್ತಾದೆ!

ಕಾಲ್ಕೆರೆದೆಯೆ ಕದನಕೆ ಬಂದೆ,
ಭರತನಂತೆ ಬಾಹುಬಲಿಯ ಮುಂದೆ!
ಎತ್ತಿ ನಿನ್ನನು ಕುಕ್ಕಿ
ಹೊಟ್ಟೆಪಚ್ಚೆಯ ಹೊರಡಿಸಬಹುದಿತ್ತು.
ಆದರೆ ಸೋದರ ಬಾಹುಬಲಿ
ಕ್ಷಮಾ ಔದಾರ್ಯದ ಧೀರಕಲಿ!
ಇನ್ನಾದರು ಹಿತವರಾರೆಂದು ತಿಳಿ:
ಇನ್ನಾದರು ಬದುಕು, ಬುದ್ಧಿಯ ಕಲಿ!
ಓ ಪಾಕಿಸ್ತಾನ,
ಸಾಕಾಯಿತೆ ರಕ್ತ ಸ್ನಾನ?

೨೨ – ೦೯ – ೧೯೬೫

ನಾ ಭಾರತ ಮುಸಲ್ಮಾನ!

ನಾ ಭಾರತ ಮುಸಲ್ಮಾನ:
ಆಲಿಸು, ನಿನಗಿದ್ದರೆ ಮಾನ;
ಪಾಲಿಸು, ನಿನಗಿದ್ದರೆ ಜ್ಞಾನ,
ಓ ಅವಮಾನಿತ ಪಾಕಿಸ್ತಾನ!
ಇನ್ನೆತ್ತೀಯ?
ಎಂದಾದರು ಕಾಶ್ಮೀರದ ಸೊಲ್ಲೆತ್ತೀಯ?
ನಾಲಗೆ ಸೀಳೀತು!
ಹಲ್ಲೂ ಉದುರೀತು!

೧೪ – ೦೯ – ೧೯೬೫

ಪರಾಭವ ಸಂವತ್ಸರ ಪುರುಷನಿಗೆ

ಹೇ ನವ ಸಂವತ್ಸರ ದೇವ,
ನಾಮವೆ ನಿನಗೆ – 'ಪರಾಭವ!?'
ಯಾರಿಗೆ ನೀ ಪರಾಭವ,
ಓ ಹೊಸ ವರ್ಷದ ಶಿವ?

ಅಸುರರಿಗೆ ನೀ ಪರಾಭವ;
ಸುರರಿಗೆ ನೀ ವಿಜಯೀ ಭವ!
ಪಾಕಿಸ್ತಾನಕೆ ಪರಾಭವ;
ಹಿಂದುಸ್ತಾನಕೆ ವಿಜಯೀ ಭವ!
ಅಧರ್ಮಕೆ ನೀ ಪರಾಭವ;
ಅಸತ್ಯಕೆ ನೀ ಪರಾಭವ;
ಅಧೈರ್ಯಕೆ ನೀ ಪರಾಭವ;
ಅಕರ್ಮಕೆ ನೀ ಪರಾಭವ;!

ಸತ್ಯಕೆ ನೀ ವಿಜಯೀ ಭವ;
ತ್ಯಾಗಕೆ ನೀ ವಿಜಯೀ ಭವ;

ಸದ್ಧರ್ಮಕೆ ನೀ ವಿಜಯೀ ಭವ;
ಸತ್ಕರ್ಮಕೆ ನೀ ವಿಜಯೀ ಭವ!

ದುಷ್ಟರಿಗೆ ನೀ ಪರಾಭವ;
ಶಿಷ್ಟರಿಗೆ ವಿಜಯೀ ಭವ;
ಕಾಮಕೆ ನೀ ಪರಾಭವ;
ಪ್ರೇಮಕೆ ವಿಜಯೀ ಭವ!

ದುರ್ಭಿಕ್ಷಕೆ ನೀ ಪರಾಭವ;
ಸುಭಿಕ್ಷಕೆ ವಿಜಯೀ ಭವ;
ಬಲಾತ್ಕಾರದಿಂಗ್ಲೀಷಿಗೆ
ನೀ ಪರಾಭವ!
ವಿಜಯೀ ಭವ; ವಿಜಯೀ ಭವ,
ಕನ್ನಡಕ್ಕೆ ವಿಜಯೀ ಭವ!
ವರ್ಣಾಶ್ರಮಕೆ ನೀ ಪರಾಭವ!
ಜಾತಿಪದ್ಧತಿಗೆ ನೀ ಪರಾಭವ!
ಅನೈಕ್ಯತೆಗೆ ನೀ ಪರಾಭವ!
ಮತೀಯತೆಗೆ ನೀ ಪರಾಭವ!

ವೇದಾಂತಕೆ ವಿಜಯೀ ಭವ;
ವಿಜ್ಞಾನಕೆ ವಿಜಯೀ ಭವ;
ನಿರ್ಮೌಢ್ಯಕೆ ವಿಜಯೀ ಭವ;
ಆಧ್ಯಾತ್ಮಕೆ ವಿಜಯೀ ಭವ!

ಸೋವಿಯತ್ತಿಗೆ ವಿಜಯೀ ಭವ;
ಚೀಣಕೆ ನೀ ಪರಾಭವ!
ಅಮೇರಿಕಾಕೆ ವಿಜಯೀ ಭವ!
ಪೋರ್ಚುಗಲ್ಲಿಗೆ ಪರಾಭವ!

ಆಂಗ್ಲೇಯರ ಅಲ್ಪತ್ವಕೆ
ಆಗು ನೀ ಪರಾಭವ!

ಆಂಗ್ಲೇಯರ ಔದಾತ್ತ್ಯಕೆ
ಜಯ ವಿಜಯೀ ಭವ!
ಹಿಂಸೆಗೆ ನೀ ಪರಾಭವ!
ಅಹಿಂಸೆಗೆ ವಿಜಯೀ ಭವ!

ಸ್ವಾತಂತ್ರ್ಯಕೆ ವಿಜಯೀ ಭವ;
ದಾಸ್ಯಕೆ ನೀ ಪರಾಭವ!
ಸೌಂದರ್ಯಕೆ ವಿಜಯೀ ಭವ;
ದಾರಿದ್ರ್ಯಕೆ ಪರಾಭವ!
ವಿಜಯೀ ಭವ, ವಿಜಯೀ ಭವ,
ಹೇ ಹರ್ಷಹರ್ಷ ಪರಾಭವ!
ವಿಜಯೀ ಭವ, ವಿಜಯೀ ಭವ,
ಹೇ ನವ ವತ್ಸರಪುರುಷ ಶಿವ!

೨೭ – ೦೩ – ೧೯೨೭